2020-21 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳ ನಿಯಮಿತ, (ಕೆ.ಹೆಚ್.ಎಫ್.) ಎ.ಪಿ.ಎಂ.ಸಿ. ಕಾಂಪ್ಲೆಕ್ಸ್, ಬಿನ್ನಿಮಿಲ್ ರಸ್ತೆ, ಬೆಂಗಳೂರು – 560 023.

****

ಗೆ,
ಅಧ್ಯಕ್ಷರು,
ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ
ಮಾರಾಟ ಮಹಾಮಂಡಳ ನಿ,
ಎ.ಪಿ.ಎಂ.ಸಿ ಕಾಂಪ್ಲೆಕ್ಸ್
ಅಗ್ರಹಾರ ಟ್ಯಾಂಕ್‌ಬಂಡ್ ರಸ್ತೆ, ಬಿನ್ನಿಮಿಲ್ ರಸ್ತೆ,
ಬೆಂಗಳೂರು– 560 023.

ದಿನಾಂಕ :

ಮಾನ್ಯರೇ,

ವಿಷಯ:– ನಿಮ್ಮ ಸಂಸ್ಥೆಯ 2020–21 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಬಿಡುಗಡೆಯ ಬಗ್ಗೆ.
ಉಲ್ಲೇಖ:– ವ್ಯ.ನಿ ಕೆ.ಹೆಚ್.ಎಫ್ ರವರ ಆದೇಶ ಪತ್ರ ಸಂಖ್ಯೆ ಕೆ.ಹೆಚ್.ಎಫ್/ವಿನಿ2/16/2020–21,
ದಿನಾಂಕ : 28–10–2020.

****

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 63(5) ರನ್ವಯ ಹಾಗೂ ಉಲ್ಲೇಖದ ಪತ್ರದನ್ವಯ ಪ್ರದತ್ತವಾದ ಅಧಿಕಾರದನ್ವಯ ಶ್ರೀ.ಟಿ. ಜಯಂತ್ ಹೆಗಡೆ, ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು ಆದ ನಾನು ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳ ನಿ. ಬೆಂಗಳೂರು, ಇದರ 2020–21 ನೇ ಸಾಲಿನ ಲೆಕ್ಕಪರಿಶೋಧನಾ ಕಾರ್ಯ ನಿರ್ವಹಿಸಿ ವರದಿಯನ್ನು ಈ ಮೂಲಕ ಬಿಡುಗಡೆ ಮಾಡಲಾಗಿದೆ.

ಲೆಕ್ಕ ಪರಿಶೋಧನಾ ವರದಿಯಲ್ಲಿ ಗಮನಿಸಲಾಗಿರುವ ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಅನುಪಾಲನಾ ವರದಿಯನ್ನು ಸಂಬಂಧಿಸಿದ ಇಲಾಖಾಧಿಕಾರಿಗಳಿಗೆ ಸಲ್ಲಿಸುವುದು.

ತಮ್ಮ ವಿಶ್ವಾಸಿ,

ಅಡಕ: ಲೆಕ್ಕಪರಿಶೋಧನಾ ವರದಿ,
ಆರ್ಥಿಕ ತ:ಖ್ತೆಗಳು, ಕುಳುವಾರು ಪಟ್ಟಿಗಳು.

ಸಿ.ಡಿ. 2 ಪ್ರತಿಗಳಲ್ಲಿ

(ಟಿ. ಜಯಂತ್ ಹೆಗಡೆ)
ಜೆ.ಟಿ. ಹೆಗಡೆ ಮತ್ತು ಕಂ
ಸನ್ನದು ಲೆಕ್ಕ ಪರಿಶೋಧಕರು, ಬೆಂಗಳೂರು
ನೊಂದಣಿ ಸಂ.014704S, ಸದಸ್ಯತ್ವ ಸಂ.203255

ದಿನಾಂಕ : 29–07–2021
ಸ್ಥಳ : ಬೆಂಗಳೂರು.

ಪ್ರತಿಯನ್ನು ಗೌರವ ಪೂರ್ವಕವಾಗಿ ಸಲ್ಲಿಸಲಾಗಿದೆ .

1. ಮಾನ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು, ಶಂಕರಮಠ ರಸ್ತೆ, ಬೆಂಗಳೂರು.
2. ಮಾನ್ಯ ಸಹಕಾರ ಸಂಘಗಳ ನಿಬಂಧಕರು ನಂ. 1 ಆಲಿ ಆಸ್ಕರ್ ರಸ್ತೆ, ಬೆಂಗಳೂರು
3. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಮಾನ್ಯ ತೋಟಗಾರಿಕೆ ನಿರ್ದೇಶಕರು, ಲಾಲ್‌ಬಾಗ್, ಬೆಂಗಳೂರು.
5. ಮಾನ್ಯ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು, ಬೆಂಗಳೂರು ನಗರ ಜಿಲ್ಲೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಕಛೇರಿ ಪ್ರತಿ.

(ಟಿ. ಜಯಂತ್ ಹೆಗಡೆ)
ಜೆ.ಟಿ. ಹೆಗಡೆ ಮತ್ತು ಕಂ
ಸನ್ನದು ಲೆಕ್ಕ ಪರಿಶೋಧಕರು, ಬೆಂಗಳೂರು
ನೊಂದಣಿ ಸಂ.014704S, ಸದಸ್ಯತ್ವ ಸಂ.203255.

ಪ ರಿ ವಿ ಡಿ

ಕ್ರಮ ಸಂ.	ವಿಷಯ	ಪುಟ ಸಂಖ್ಯೆ
1.	ಲೆಕ್ಕ ಪರಿಶೋಧನೆ ಪೂರೈಸಿದ ವಿವರಗಳ ಮುಖಪತ್ರ	I
2.	ಲೆಕ್ಕ ಪರಿಶೋಧನಾ ವರದಿ	1 - 31
3.	ಜಮಾ ಖರ್ಚು, ಲಾಭ ನಷ್ಟ, ಆಸ್ತಿ ಜವಾಬ್ದಾರಿ ತಃಖ್ತೆ	32 – 41
4.	ಕಾರ್ಯಕಾರಿ ಮಂಡಳಿ ದೃಢೀಕರಣ	42 – 43
5.	ಲೆಕ್ಕ ಪರಿಶೋಧನಾ ದೃಢೀಕರಣ	44
6.	ಕುಳುವಾರು ತಃಖ್ತೆಗಳ ವಿವರಗಳು	45 – 48
7.	ವರ್ಗೀಕರಣ ಪಟ್ಟಿ	59

ಪರಿಶೀಲಿಸಿದೆ

ಟಿ. ಜಯಂತ್ ಹೆಗಡೆ
(ಜೆ.ಟಿ. ಹೆಗಡೆ ಮತ್ತು ಕಂ)
ಸನ್ನದು ಲೆಕ್ಕ ಪರಿಶೋಧಕರು, ಬೆಂಗಳೂರು
ನೊಂದಣಿ ಸಂ.014704S, ಸದಸ್ಯತ್ವ ಸಂ.203255

ದಿನಾಂಕ : 29.07.2021
ಸ್ಥಳ : ಬೆಂಗಳೂರು.

ಜೆ.ಟಿ.ಹೆಗಡೆ ಮತ್ತು ಕಂ.,
ಸನ್ನದು ಲೆಕ್ಕ ಪರಿಶೋಧಕರು

ಫ್ಲಾಟ್ ನಂ. 008, ನೆಲ ಮಹಡಿ,
ನಂದ ಆಷೀರ್ವಾದ್ ಅಪಾರ್ಟ್‌ಮೆಂಟ್,
ನಂ. 1, 2ನೇ ಮುಖ್ಯರಸ್ತೆ,
ಕೆನರಾ ಬ್ಯಾಂಕ್ ಕಾಲೋನಿ, ಚಂದ್ರ ಲೇಔಟ್,
ಬೆಂಗಳೂರು-560072
ದೂರವಾಣಿ: 080-23390530/ 9538919960
ಈಮೇಲ್: cajthegde@yahoo.com

ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ

ಇವರಿಗೆ,

ಮಾನ್ಯ ಸದಸ್ಯರುಗಳು,
ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳ ನಿ.,
ಎ.ಪಿ.ಎಂ.ಸಿ ಕಾಂಪ್ಲೆಕ್ಸ್, ಅಗ್ರಹಾರ ಟ್ಯಾಂಕ್‌ಬಂಡ್ ರಸ್ತೆ,
ಬಿನ್ನಿಮಿಲ್ ರಸ್ತೆ, ಬೆಂಗಳೂರು-560056,

1. ಆರ್ಥಿಕ ತಃಖ್ತೆಗಳ ಮೇಲಿನ ನಮ್ಮ ಅಭಿಪ್ರಾಯ

ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳ ನಿ., ಇದರ ದಿನಾಂಕ 31/03/2021 ರಲ್ಲಿ ಇದ್ದಂತಹ ಆಸ್ತಿ ಜವಾಬ್ದಾರಿ ತಃಖ್ತೆ ಹಾಗೂ ಸದರಿ ದಿನಾಂಕದಂದು ಅಂತ್ಯಗೊಂಡ ಸಾಲಿನ ಲಾಭ ಮತ್ತು ನಷ್ಟ ತಃಖ್ತೆ ಹಾಗೂ ಜಮಾ ಖರ್ಚು ತಃಖ್ತೆಯ ಲೆಕ್ಕಪರಿಶೋಧನೆಯನ್ನು ನಾವು ಮಾಡಿರುತ್ತೇವೆ. ಈ ವರದಿಯೊಂದಿಗೆ ಅಡಕಗೊಳಿಸಲಾಗಿರುವ ಸಂಸ್ಥೆಯ ಆರ್ಥಿಕ ತಃಖ್ತೆಗಳನ್ನು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ, 1959 ಅನ್ವಯ ಎಲ್ಲಾ ಪ್ರಮುಖ ಅಂಶಗಳೊಂದಿಗೆ ಸಿದ್ಧಪಡಿಸಲಾಗಿದೆ ಎಂದು ನಾವು ಅಭಿಪ್ರಾಯ ಪಡುತ್ತೇವೆ.

2. ನಮ್ಮ ಅಭಿಪ್ರಾಯಕ್ಕೆ ಆಧಾರವಾಗಿರುವ ಅಂಶಗಳು:

ನಾವು ನಮ್ಮ ಲೆಕ್ಕಪರಿಶೋಧನೆಯನ್ನು ಲೆಕ್ಕಪರಿಶೋಧನಾ ಗುಣಮಟ್ಟಗಳ ಅನ್ವಯ ನಿರ್ವಹಿಸಿರುತ್ತೇವೆ. ಆ ಲೆಕ್ಕಪರಿಶೋಧನಾ ಗುಣಮಟ್ಟಗಳಡಿಯಲ್ಲಿರುವ ನಮ್ಮ ಮತ್ತಷ್ಟು ಹೊಣೆಗಾರಿಕೆಗಳನ್ನು ಈ ವರದಿಯ '**ಆರ್ಥಿಕ ತಃಖ್ತೆಗಳ ಲೆಕ್ಕಪರಿಶೋಧನೆಯಲ್ಲಿ ಲೆಕ್ಕಪರಿಶೋಧಕರ ಹೊಣೆಗಾರಿಕೆಗಳು** ಶೀರ್ಷಿಕೆಯಡಿಯಲ್ಲಿ ವಿವರಿಸಲಾಗಿದೆ. ಆರ್ಥಿಕ ತಃಖ್ತೆಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ನೈತಿಕ ಅಗತ್ಯತೆಗೆ ಅನುಗುಣವಾಗಿ ಲೆಕ್ಕಪರಿಶೋಧನೆ ಕೈಗೊಂಡಿರುವ ಸಂಸ್ಥೆಯೊಂದಿಗೆ ನಾವು ಸ್ವಾಯತ್ತತೆಯನ್ನು ಕಾಪಾಡಿಕೊಂಡಿರುತ್ತೇವೆ ಮತ್ತು ಅಂತಹ ಅಗತ್ಯತೆಗಳ ಅನ್ವಯ ನಮ್ಮ ಇತರೆ ಹೊಣೆಗಾರಿಕೆಗಳನ್ನು ಪೂರೈಸಿರುತ್ತೇವೆ. ಈ ಮೇಲಿನ ವಿಷಯವನ್ನು ಹೊರತುಪಡಿಸಿ, ನಮ್ಮ ಅಭಿಪ್ರಾಯ ವ್ಯಕ್ತಪಡಿಸಲು ನಾವು ಪಡೆದಿರುವ ಲೆಕ್ಕಪರಿಶೋಧನಾ ಪುರಾವೆಗಳು ಸಾಕಷ್ಟು ಮತ್ತು ಯುಕ್ತವಾದ ಆಧಾರವನ್ನು ಒದಗಿಸುತ್ತವೆಯೆಂದು ನಾವು ನಂಬಿರುತ್ತೇವೆ.

3. ಆರ್ಥಿಕ ತಃಖ್ತೆಗಳ ಬಗ್ಗೆ ಆಡಳಿತ ಮಂಡಳಿಯ ಹೊಣೆಗಾರಿಕೆಗಳು:

ಆರ್ಥಿಕ ತಃಖ್ತೆಗಳನ್ನು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ, 1959 ಅನ್ವಯ ಸಿದ್ಧಪಡಿಸುವುದು ಮತ್ತು ವಂಚನೆ ಅಥವಾ ದೋಷದ ದೆಸೆಯಿಂದಾಗುವ ಗುರುತರವಾದ ತಪ್ಪು ಹೇಳಿಕೆಗಳಿಂದ ಮುಕ್ತವಾಗಿರುವಂತೆ ಆರ್ಥಿಕ ತಃಖ್ತೆಗಳನ್ನು ಸಿದ್ಧಪಡಿಸಲು ಅಗತ್ಯವಾದ ಆಂತರಿಕ ಹತೋಟಿಯನ್ನು ನಿರ್ಧರಿಸುವುದು ಆಡಳಿತ ಮಂಡಳಿಯ ಹೊಣೆಗಾರಿಕೆಯಾಗಿರುತ್ತದೆ. ಆರ್ಥಿಕ ತಃಖ್ತೆಗಳನ್ನು ಸಿದ್ಧಗೊಳಿಸುವಾಗ ಸಂಸ್ಥೆಯ ಕಾರ್ಯಚರಣೆಯನ್ನು ಮುಂದುವರೆಸುವ ಸಾಮರ್ಥ್ಯದ ಬಗ್ಗೆ ನಿರ್ಣಯಿಸಿ, ಸಂಸ್ಥೆಯನ್ನು ವಿಸರ್ಜಿಸುವ ಇರಾದೆ ಅಥವಾ ಕಾರ್ಯಚರಣೆಯನ್ನು ಸ್ಥಗಿತಗೊಳಿಸುವ ಅಥವಾ ಆ ರೀತಿ ಮಾಡಲು ಇವುಗಳನ್ನು ಬಿಟ್ಟು ವಾಸ್ತವಿಕವಾಗಿ ಅನ್ಯ ಮಾರ್ಗವಿಲ್ಲದೇ ಇರುವಂತಹ ಸಂದರ್ಭಗಳನ್ನು ಹೊರತುಪಡಿಸಿ ಸಂಸ್ಥೆಯು ಕ್ರಿಯಾಶೀಲವಾಗಿ ಮುಂದುವರೆಯುವ ವಿಷಯಗಳನ್ನು ಬಹಿರಂಗಗೊಳಿಸುವುದು ಮತ್ತು ಕ್ರಿಯಾಶೀಲವಾಗಿ ಮುಂದುವರೆಯುವ ಆಧಾರದಲ್ಲಿ ಲೆಕ್ಕಪತ್ರಗಳನ್ನು ಸಿದ್ಧಗೊಳಿಸುವುದು ಆಡಳಿತ ಮಂಡಳಿಯ ಹೊಣೆಗಾರಿಕೆಯಾಗಿರುತ್ತದೆ. ಆರ್ಥಿಕ ತಃಖ್ತೆಗಳ ವರದಿಯನ್ನು ಸಿದ್ಧಪಡಿಸುವ ಪ್ರಕ್ರಿಯೆಗಳ ಮೇಲ್ವಿಚಾರಣೆಯು ಸಂಸ್ಥೆಯ ಆಡಳಿತ ಮಂಡಳಿಯ ಹೊಣೆಗಾರಿಕೆಯಾಗಿರುತ್ತದೆ

J.T. HEGDE & CO. BENGALURU FRN: 014704S Chartered Accountants

4. ಆರ್ಥಿಕ ತಃಖ್ತೆಗಳ ಲೆಕ್ಕಪರಿಶೋಧನೆಯಲ್ಲಿ ಲೆಕ್ಕಪರಿಶೋಧಕರ ಹೊಣೆಗಾರಿಕೆಗಳು:

ಒಟ್ಟಾರೆಯಾಗಿ ಆರ್ಥಿಕತಃಖ್ತೆಗಳು, ವಂಚನೆ ಅಥವಾ ದೋಷದ ದೆಸೆಯಿಂದಾಗುವ ಗುರುತರವಾದ ತಪ್ಪು ಹೇಳಿಕೆಗಳಿಂದ ಮುಕ್ತವಾಗಿವೆಯೇ ಎಂಬ ಬಗ್ಗೆ ಯುಕ್ತವಾದ ಭರವಸೆ ಪಡೆಯುವುದು ಮತ್ತು ನಮ್ಮ ಅಭಿಪ್ರಾಯುಗಳನ್ನು ಒಳಗೊಂಡ ವರದಿಯನ್ನು ನೀಡುವುದು ಲೆಕ್ಕಪರಿಶೋಧನೆಯ ಉದ್ದೇಶವಾಗಿರುತ್ತದೆ. ಯುಕ್ತವಾದ ಭರವಸೆಯು ಉಚ್ಚಮಟ್ಟದ ಭರವಸೆಯಾಗಿದ್ದರೂ ಸಹ ಲೆಕ್ಕಪರಿಶೋಧನಾ ಗುಣಮಟ್ಟಗಳ ಅನುಸಾರವಾಗಿ ಕೈಗೊಂಡ ಲೆಕ್ಕಪರಿಶೋಧನೆಯು ಗುರುತರವಾದ ತಪ್ಪು ಹೇಳಿಕೆಗಳಿದ್ದರೂ ಅವುಗಳನ್ನು ಪತ್ತೆ ಮಾಡುತ್ತದೆ ಎಂದು ಯಾವುದೇ ಸಂದರ್ಭಗಳಲ್ಲೂ ಖಾತರಿ ನೀಡಲು ಸಾಧ್ಯವಿರುವುದಿಲ್ಲ. ಗುರುತರವಾದ ತಪ್ಪು ಹೇಳಿಕೆಗಳು ವಂಚನೆ ಅಥವಾ ದೋಷಗಳಿಂದ ಉದ್ಭವಿಸಬಹುದಾದರೂ, ಬಳಕೆದಾರರು ಸದರಿ ಆರ್ಥಿಕ ತಃಖ್ತೆಗಳ ಆಧಾರದ ಮೇಲೆ ತೆಗೆದುಕೊಳ್ಳುವ ಆರ್ಥಿಕ ನಿರ್ಧಾರಗಳಲ್ಲಿ ಬಿಡಿಯಾಗಿ ಅಥವಾ ಒಟ್ಟಾರೆಯಾಗಿ ತಕ್ಕಮಟ್ಟಿಗೆ ಪ್ರಭಾವ ಬೀರುವ ನಿರೀಕ್ಷೆಯಿದ್ದಲ್ಲಿ ಮಾತ್ರ ಅಂತಹ ತಪ್ಪುಹೇಳಿಕೆಗಳನ್ನು ಗುರುತರವಾದದ್ದು ಎಂದು ಪರಿಗಣಿಸಲಾಗುತ್ತದೆ. ಲೆಕ್ಕಪರಿಶೋಧನಾ ಗುಣಮಟ್ಟಗಳ ಅನ್ವಯ, ಲೆಕ್ಕಪರಿಶೋಧನೆ ಒಂದರ ಭಾಗವಾಗಿ, ನಾವು ವೃತ್ತಿಪರ ತೀರ್ಮಾನಗಳನ್ನು ತೆಗೆದುಕೊಂಡಿದ್ದು ಹಾಗೂ ವೃತ್ತಿಪರ ಸಂಶಯಾತ್ಮಕ ಮನೋಭಾವವನ್ನು ಲೆಕ್ಕಪರಿಶೋಧನೆಯುದ್ದಕ್ಕೂ ನಿರ್ವಹಿಸಿರುತ್ತೇವೆ. ನಾವು ವಂಚನೆ ಅಥವಾ ದೋಷದ ದೆಸೆಯಂದ ಉಂಟಾಗಬಹುದಾದ ಗುರುತರ ತಪ್ಪುಹೇಳಿಕೆಗಳ ಅಪಾಯದ ಪರಿಣಾಮಗಳನ್ನು ಗುರುತಿಸುವುದು ಮತ್ತು ನಿರ್ಧರಿಸುವುದನ್ನು ಒಳಗೊಂಡಂತೆ ಯುಕ್ತ ಕಾರ್ಯವಿಧಾನವನ್ನು ನಾವು ಆಯ್ಕೆ ಮಾಡಿ ಕಾರ್ಯಗತಗೊಳಿಸಿರುತ್ತೇವೆ. ಹಾಗೂ ನಮ್ಮ ಅಭಿಪ್ರಾಯಗಳಿಗೆ ಆಧಾರ ಒದಗಿಸುವ ಸಾಕಷ್ಟು ಮತ್ತು ಯುಕ್ತವಾದ ಪುರಾವೆಗಳನ್ನು ಪಡೆದಿರುತ್ತೇವೆ. ವಂಚನೆಯಿಂದ ಉಂಟಾಗಬಹುದಾದ ಗುರುತರವಾದ ತಪ್ಪು ಹೇಳಿಕೆಗಳನ್ನು ಪತ್ತೆ ಮಾಡದಿರುವುದು, ದೋಷದ ದೆಸೆಯಿಂದ ಉಂಟಾಗಬಹುದಾದ ಗುರುತರವಾದ ತಪ್ಪು ಹೇಳಿಕೆಗಳನ್ನು ಪತ್ತೆ ಮಾಡದಿರುವುದಕ್ಕಿಂತ ಹೆಚ್ಚಿನ ಅಪಾಯವನ್ನು ಉಂಟುಮಾಡುತ್ತದೆ. ಏಕೆಂದರೆ, ವಂಚನೆಯು ಒಳಸಂಚು, ಸುಳ್ಳು ದಾಖಲೆ, ಉದ್ದೇಶಪೂರ್ವಕ ಕರ್ತವ್ಯಲೋಪ, ತಪ್ಪಾಗಿ ನಿರೂಪಿಸುವಿಕೆ ಅಥವಾ ಆಂತರಿಕ ಹತೋಟಿಯ ಅತಿಕ್ರಮಣಗಳನ್ನು ಒಳಗೊಂಡಿರಬಹುದಾಗಿರುತ್ತದೆ.

ನಾವು ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಸಂಸ್ಥೆಯ ಆಂತರಿಕ ಹತೋಟಿಯ ಗುಣಮಟ್ಟವನ್ನು ಪರಿಗಣಿಸಿ ಸಂದರ್ಭೋಚಿತವಾಗಿ ಯುಕ್ತ ಲೆಕ್ಕಪರಿಶೋಧನೆಯ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳಲು ಸಂಸ್ಥೆಯ ಆಂತರಿಕ ಹತೋಟಿಯ ಬಗ್ಗೆ ಮಾಹಿತಿಯನ್ನು ಪಡೆದಿರುತ್ತೇವೆಯೇ ಹೊರತು ಸಂಸ್ಥೆಯ ಪರಿಣಾಮಕಾರಿಯಾದ ಆಂತರಿಕ ಹತೋಟಿಯ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವ ಉದ್ದೇಶವಿರುವುದಿಲ್ಲ. ಆಡಳಿತಮಂಡಳಿಯು ಬಳಸಿರುವ ಲೆಕ್ಕನೀತಿಗಳ ಔಚಿತ್ಯತೆಯ ಮೌಲ್ಯಮಾಪನ ಮತ್ತು ಲೆಕ್ಕಾಚಾರದ ಅಂದಾಜುಗಳ ಸಮರ್ಪಕತೆ ಹಾಗೂ ಸಂಬಂಧಪಟ್ಟ ವಿಷಯಗಳ ಬಹಿರಂಗಗೊಳಿಸುವಿಕೆ ಬಗ್ಗೆ ನಾವು ಮೌಲ್ಯಮಾಪನ ಮಾಡಿರುತ್ತೇವೆ. ಆಡಳಿತ ಮಂಡಳಿಯು ಕ್ರಿಯಾಶೀಲ ಸಂಸ್ಥೆಯಾಗಿ ಮುಂದುವರೆಯುವ ಆಧಾರದಲ್ಲಿ ಸಿದ್ಧಗೊಳಿಸಿರುವ ಲೆಕ್ಕಾಚಾರಗಳ ಸಮರ್ಪಕತೆ ಮತ್ತು ಲೆಕ್ಕಪರಿಶೋಧನಾ ಪುರಾವೆಗಳನ್ನು ಆಧರಿಸಿ, ಸಂದೇಹ ಬೀರಬಹುದಾದ ಯಾವುದಾದರೂ ಪ್ರಮುಖ ಘಟನೆಗಳು ಅಥವಾ ವಿದ್ಯಮಾನಗಳಿಂದ ಸಂಸ್ಥೆಯ ಕಾರ್ಯಾಚರಣೆಯ ಸಾಮರ್ಥ್ಯದ ಮೇಲೆ ಇರಬಹುದಾದ ಗಣನೀಯ ಅನಿಶ್ಚಿತ ಸ್ಥಿತಿಗತಿಗಳ ಬಗ್ಗೆ ನಾವು ತೀರ್ಮಾನಿಸಿರುತ್ತೇವೆ. ಗಣನೀಯವಾದ ಅನಿಶ್ಚಿತತೆಯೊಂದು ಇದೆಯೆಂದು ನಾವು ತೀರ್ಮಾನಿಸಿದಲ್ಲಿ, ಆರ್ಥಿಕ ತಃಖ್ತೆಗಳಲ್ಲಿ ಅವುಗಳಿಗೆ ಸಂಬಂಧಿಸಿದ ವಿಷಯಗಳನ್ನು ಬಹಿರಂಗಗೊಳಿಸಿರುವ ಬಗ್ಗೆ ಗಮನ ಸೆಳೆಯಬೇಕಾಗಿರುತ್ತದೆ ಅಥವಾ ಒಂದು ವೇಳೆ ಸಾಕಷ್ಟು ಪ್ರಮಾಣದಲ್ಲಿ ವಿಷಯವನ್ನು ಬಹಿರಂಗಗೊಳಿಸದೇ ಇರುವ ಪಕ್ಷದಲ್ಲಿ ನಮ್ಮ ಅಭಿಪ್ರಾಯವನ್ನು ಮಾರ್ಪಾಡುಗೊಳಿಸಬೇಕಾಗಿರುತ್ತದೆ. ನಮ್ಮ ತೀರ್ಮಾನಗಳು ನಮ್ಮ ಲೆಕ್ಕಪರಿಶೋಧನಾ ವರದಿಯ ದಿನಾಂಕದವರೆಗೆ ಪಡೆದಿರುವ ಲೆಕ್ಕಪರಿಶೋಧನಾ ಪುರಾವೆಗಳನ್ನು ಆಧರಿಸಿವೆ. ಹಾಗಿದ್ದರೂ, ಭವಿಷ್ಯದ ಘಟನೆಗಳು ಅಥವಾ ವಿದ್ಯಮಾನಗಳು ಸಂಸ್ಥೆಯ ಕಾರ್ಯಚರಣೆಯನ್ನು ಸ್ಥಗಿತಗೊಳಿಸಲು ಕಾರಣವಾಗಬಹುದು. ನಮ್ಮ ಲೆಕ್ಕಪರಿಶೋಧನೆಯಲ್ಲಿ ಗುರುತಿಸಿರುವ ಮಹತ್ವದ ಆಂತರಿಕ ಹತೋಟಿಗಳಲ್ಲಿನ ನ್ಯೂನತೆಗಳು ಏನಾದರೂ ಇದ್ದಲ್ಲಿ ಅವುಗಳನ್ನು ಒಳಗೊಂಡಂತೆ ಲೆಕ್ಕಪರಿಶೋಧನೆಯ ಯೋಜಿತ ವ್ಯಾಪ್ತಿ ಮತ್ತು ಸಮಯ ಮತ್ತು ಲೆಕ್ಕಪರಿಶೋಧನೆಯಲ್ಲಿ ಗುರುತಿಸಿರುವ ಮಹತ್ವದ ಅಂಶಗಳ ಬಗ್ಗೆ ಹಾಗೂ ಇತರೆ ವಿಚಾರಗಳ ಬಗ್ಗೆ ಆಡಳಿತ ಮಂಡಳಿಗೆ ತಿಳಿಸಿರುತ್ತೇವೆ.

5. ಕಾನೂನು ಹಾಗೂ ನಿಯಂತ್ರಣ ಅಗತ್ಯತೆಯ ಬಗ್ಗೆ ವರದಿ:

ಮೇಲ್ಕಾಣಿಸಿದ 1ರಿಂದ 4ನೇ ವಾಕ್ಯವೃಂದಗಳಲ್ಲಿ ಪರಾಮರ್ಶಿಸಿದ ಲೆಕ್ಕಪರಿಶೋಧನಾ ಮಿತಿಗನುಸಾರವಾಗಿ ಹಾಗೂ ಈ ವರದಿಯೊಂದಿಗೆ ಲಗತ್ತಿಸಿದ ವಿಸ್ತೃತ ಲೆಕ್ಕಪರಿಶೋಧನಾ ವರದಿಯಲ್ಲಿ ಉಲ್ಲೇಖಿಸಿದ ವಿಷಯಗಳನ್ನು ಹೊರತುಪಡಿಸಿ ನಾವು ಹೇಳುವುದೇನೆಂದರೆ:-

ನಮ್ಮ ಅತ್ಯುತ್ತಮ ತಿಳುವಳಿಕೆ ಹಾಗೂ ನಂಬಿಕೆ ಪ್ರಕಾರ ಲೆಕ್ಕ ಪರಿಶೋಧನೆಗೆ ಅಗತ್ಯವೆಂದು ಕಂಡುಬಂದ ಎಲ್ಲಾ ಮಾಹಿತಿ ಹಾಗೂ ವಿವರಣೆಗಳನ್ನು ನಾವು ಪಡೆದದ್ದು, ಅವು ತೃಪ್ತಿಕರವಾಗಿವೆಯೆಂದು ನಾವು ಮನಗಂಡಿದ್ದೇವೆ. ನಮ್ಮ ಗಮನಕ್ಕೆ ಬಂದ ಸಹಕಾರ ಸಂಘದ ವ್ಯವಹಾರಗಳು ಸಂಘದ ಅಧಿಕಾರ ವ್ಯಾಪ್ತಿಯ ಒಳಗಿದ್ದವು ಮತ್ತು ನಮ್ಮ ಅಭಿಪ್ರಾಯದ ಪ್ರಕಾರ, ನಮಗೆ ಗೊತ್ತಿರುವ ಮಾಹಿತಿಯಂತೆ ಮತ್ತು ನಮಗೆ ಕೊಟ್ಟಿರುವ ವಿವರಣೆಯಂತೆ ಹಣಕಾಸಿನ ವಿವರಣಾ ಪಟ್ಟಿಗಳನ್ನು ಅವಲೋಕಿಸಿದಾಗ

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರ ಪ್ರಕಾರ ನೀಡಬೇಕಾದ ಮಾಹಿತಿಯನ್ನೊಳಗೊಂಡಿರುತ್ತದೆ ಮತ್ತು ಭಾರತದಲ್ಲಿ ಅಂಗೀಕಾರವಾಗಿರುವ ಲೆಕ್ಕ ಪತ್ರ ನಿರ್ವಹಣಾ ತತ್ವಗಳ ಅನುಸಾರವಾಗಿರುತ್ತದೆ.

ಅ) ನಮ್ಮ ಜ್ಞಾನ ಹಾಗೂ ನಂಬಿಕೆಗೆ ತಕ್ಕಂತೆ ಹಾಗೂ ನಮ್ಮ ಪರಿಶೋಧನೆಗೆ ಅಗತ್ಯವಾಗಿರುವ ಎಲ್ಲಾ ಮಾಹಿತಿ ಹಾಗೂ ಹೇಳಿಕೆಗಳನ್ನು ಪಡೆದಿರುತ್ತೇವೆ. ನಾವು ಪರೀಕ್ಷಿಸಿದಂತೆ ನಮ್ಮ ಅಭಿಪ್ರಾಯದಲ್ಲಿ ಮೇಲ್ಕಂಡ ಸಂಸ್ಥೆಯ ಸಮಂಜಸವಾದ ಲೆಕ್ಕಪುಸ್ತಕಗಳನ್ನು ಹೊಂದಿರುತ್ತದೆ.

ಆ) ವರದಿಯಲ್ಲಿ ಉಲ್ಲೇಖಿಸಿರುವಂತೆ ಆಸ್ತಿ-ಜವಾಬ್ದಾರಿ ತಃಖ್ತೆ ಹಾಗೂ ಆದಾಯ ವೆಚ್ಚ ತಃಖ್ತೆಯು ಸಂಸ್ಥೆಯ ಲೆಕ್ಕ ಪುಸ್ತಕಗಳೊಂದಿಗೆ ತಾಳೆ ಹೊಂದುತ್ತದೆ.

ಇ) ನಮಗೆ ಒದಗಿಸಿರುವ ಮಾಹಿತಿಯಂತೆ ಹಾಗೂ ನೀಡಿರುವ ಹೇಳಿಕೆಗಳಂತೆ ನಮ್ಮ ಅಭಿಪ್ರಾಯದಲ್ಲಿ ಪ್ರಸ್ತುತ ಲೆಕ್ಕಗಳು ಲಗತ್ತಿಸಿರುವ ಕುಳುವಾರುಗಳು ಹಾಗೂ ಲೆಕ್ಕಪತ್ರಗಳ ನೀತಿಗಳೊಂದಿಗೆ ಓದಿಕೊಂಡಾಗ, ನಿಜವಾದ ಹಾಗೂ ಸರಿಯಾದ ಚಿತ್ರಣವನ್ನು ನೀಡುತ್ತದೆ.

ಜೆ.ಟಿ.ಹೆಗಡೆ ಮತ್ತು ಕಂ.
ಸನ್ನದು ಲೆಕ್ಕಪರಿಶೋಧಕರು

J T HEGDE & CO BENGALURU FRN: 014704S Chartered Accountants

ಟಿ ಜಯಂತ್ ಹೆಗಡೆ
ಪ್ರೊಪ್ರೈಟರ್
ಸದಸ್ಯತ್ವ ಸಂಖ್ಯೆ : 203255
ಸಂಸ್ಥೆಯ ನೋಂದಣಿ ಸಂಖ್ಯೆ : 014704S

ದಿನಾಂಕ: 29/07/2021
ಸ್ಥಳ: ಬೆಂಗಳೂರು

UDIN: 21203255AAAAFT9631

J T HEGDE & CO
Chartered Accountants
Flat No. 008, Ground Floor,
Nanda Ashirwad Apartments,
No 1, 2nd Main Road, Canara Bank Colony
Chandra Layout, BENGALURU - 560 072.

I

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ.

ಲೆಕ್ಕಪರಿಶೋಧನಾ ವರದಿಗೆ ಲಗತ್ತಿಸುವ ಮುಖ ಪತ್ರ (ಫೇಸಿಂಗ್ ಷೀಟ್)

ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳ ನಿ. ಬೆಂಗಳೂರು, ಇದರ 2020-21 ನೇ ಸಾಲಿನ ಲೆಕ್ಕಪರಿಶೋಧನೆ ಪೂರೈಸಿದ ವಿವರಗಳ ಮುಖಪತ್ರ

ಲೆಕ್ಕಪರಿಶೋಧನೆ ಮಾಡಿದ ಸಂಸ್ಥೆಯ ಹೆಸರು ಮತ್ತು ವಿಳಾಸ:	ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳ ನಿ., ಎ.ಪಿ.ಎಂ.ಸಿ. ಕಟ್ಟಡ, ಅಗ್ರಹಾರ ಟ್ಯಾಂಕ್‌ಬಂಡ್ ರಸ್ತೆ, ಬಿನ್ನಿಮಿಲ್ ರೋಡ್, ಬೆಂಗಳೂರು-560 023
ಹಿಂದಿನ ಸಾಲಿನ ಲೆಕ್ಕಪರಿಶೋಧನೆ ಮಾಡಿದ ಲೆಕ್ಕಪರಿಶೋಧನಾ ಅಧಿಕಾರಿಯ ಹೆಸರು ಹಾಗೂ ಹುದ್ದೆ, ಲೆಕ್ಕಪರಿಶೋಧನೆ ಮಾಡಿದ ಅವಧಿ.	**ಶ್ರೀ. ಟಿ. ಜಯಂತ್ ಹೆಗಡೆ** ಜೆ.ಟಿ. ಹೆಗಡೆ ಅಂಡ್ ಕಂಪನಿ ಸನ್ನದು ಲೆಕ್ಕ ಪರಿಶೋಧಕರು ದಿನಾಂಕ : 01-04-2019 ರಿಂದ 31-03-2020 2019-20 ನೇ ಸಾಲು
ಪ್ರಸಕ್ತ ಸಾಲಿನ ಲೆಕ್ಕಪರಿಶೋಧನೆ ಮಾಡಿದ ಲೆಕ್ಕಪರಿಶೋಧನಾ ಅಧಿಕಾರಿಯ ಅ. ಹೆಸರು ಹಾಗೂ ಹುದ್ದೆ. ಆ. ಲೆಕ್ಕಪರಿಶೋಧನಾ ಅವಧಿ.	**ಶ್ರೀ. ಟಿ. ಜಯಂತ್ ಹೆಗಡೆ** ಜೆ.ಟಿ. ಹೆಗಡೆ ಅಂಡ್ ಕಂಪನಿ ಸನ್ನದು ಲೆಕ್ಕ ಪರಿಶೋಧಕರು ದಿನಾಂಕ : 01-04-2020 ರಿಂದ 31-03-2021 2020-21 ನೇ ಸಾಲು
ಪ್ರಸಕ್ತ ಸಾಲಿನ ಲೆಕ್ಕಪರಿಶೋಧನೆಗೆ ಸಹಾಯ ಮಾಡಿದ ಲೆಕ್ಕಪರಿಶೋಧನಾ ತಂಡದವರ ಹೆಸರು, ಹುದ್ದೆ ಹಾಗೂ ಲೆಕ್ಕಪರಿಶೋಧನೆಗೆ ಸಹಾಯ ಮಾಡಿದ ಲೆಕ್ಕಪರಿಶೋಧನಾ ಅವಧಿ. ಪ್ರಸಕ್ತ ಸಾಲಿನ ಲೆಕ್ಕಪರಿಶೋಧನೆ. ಅ. ಪ್ರಾರಂಭಿಸಿದ ದಿನಾಂಕ: ಆ. ಮುಕ್ತಾಯಗೊಳಿಸಿದ ದಿನಾಂಕ: ಇ. ಲೆಕ್ಕಪರಿಶೋಧನೆಗೆ ತೆಗೆದುಕೊಂಡ ಒಟ್ಟು ದಿನಗಳು.	ಇಲ್ಲ ದಿನಾಂಕ : 21-06-2021 ದಿನಾಂಕ : 20-07-2021 15 ದಿನಗಳು
ಪ್ರಸಕ್ತ ಸಾಲಿನ ಲೆಕ್ಕಪರಿಶೋಧನೆಯ ಮೇಲ್ವಿಚಾರಣೆ ಮಾಡಿದ ಅಧಿಕಾರಿಯ ಹೆಸರು ಹಾಗೂ ಹುದ್ದೆ.	ಇಲ್ಲ
ಲೆಕ್ಕಪರಿಶೋಧನಾ ನಿರ್ದೇಶನದ ಸೂಚನೆ ಸಂ 17 ರ ಕಂಡಿಕೆ ನಂ. 38,39,55,56,57,58,59,61,71,72,73,81,82 ರಂತೆ	-
ಲೆಕ್ಕಪರಿಶೋಧನಾ ನಿರ್ದೇಶನದ ಸಂ.18 ಕಂಡಿಕೆ 22,31,32 ರಂತೆ ಆಯ್ಕೆ ಮಾಡಿ ಪರಿಶೀಲಿಸಿದುದರ ವಿವರಗಳ ಪಟ್ಟಿ ಲಗತ್ತಿಸಿದೆಯೇ ?	-
ಲೆಕ್ಕಪರಿಶೋಧನಾ ತರಗತಿ: ಅ. ಹಿಂದಿನ ಸಾಲಿನ ತರಗತಿ ಆ. ಪ್ರಸಕ್ತ ಸಾಲಿನ ತರಗತಿ	 : 'ಬಿ' ತರಗತಿ : 'ಬಿ' ತರಗತಿ.

ಮೊಕ್ಕಾಂ: ಬೆಂಗಳೂರು
ದಿನಾಂಕ : 29.07.2021

(ಟಿ. ಜಯಂತ್ ಹೆಗಡೆ)
ಜೆ.ಟಿ. ಹೆಗಡೆ ಮತ್ತು ಕಂ
ಸನ್ನದು ಲೆಕ್ಕ ಪರಿಶೋಧಕರು, ಬೆಂಗಳೂರು
ನೊಂದಣಿ ಸಂ.014704S, ಸದಸ್ಯತ್ವ ಸಂ.203255

ಕರ್ನಾಟಕ ಸರ್ಕಾರ

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ

ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾ ಮಂಡಳ ನಿಯಮಿತ,
ಬೆಂಗಳೂರು, ಇದರ 2020-21 ನೇ ಸಾಲಿನ
ಲೆಕ್ಕಪರಿಶೋಧನಾ ವರದಿ.

(ಹಣ ದುರುಪಯೋಗ ಹಾಗೂ ಗುರುತರವಾದ ನ್ಯೂನ್ಯತೆಗಳ ಬಗ್ಗೆ --------
ಕಂಡಿಕೆಗಳನ್ನು ಓದುವುದು)

ಭಾಗ -I

1.		**ಸಂಸ್ಥೆಯ ಹೆಸರು ಮತ್ತು ವಿಳಾಸ:**	ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳ ನಿಯಮಿತ (ಕೆ.ಹೆಚ್.ಎಫ್.) ಬೆಂಗಳೂರು, ಎ.ಪಿ.ಎಂ.ಸಿ., ಕಾಂಪ್ಲೆಕ್ಸ್, ಅಗ್ರಹಾರ ಟ್ಯಾಂಕ್ ಬಂಡ್ ರಸ್ತೆ, ಬಿನ್ನಿಮಿಲ್ ರಸ್ತೆ, ಬೆಂಗಳೂರು - 560 023.
	1.	ನೋಂದಣಿ ಸಂಖ್ಯೆ ಮತ್ತು ದಿನಾಂಕ.	ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) ಬೆಂಗಳೂರು ರವರ ನೋಂದಣಿ ಸಂ.ಪಿ.ಆರ್.ಎಸ್./2/ಪಿ.ಎಂ.ಸಿ./83/20772/1995-96 ದಿನಾಂಕ : 25-10-1996 ರಂತೆ ನೋಂದಣಿಯಾಗಿರುತ್ತದೆ.
	2.	ಸಂಘದ ಕಾರ್ಯವ್ಯಾಪ್ತಿ	ಸಂಘದ ಆಡಳಿತ ವ್ಯಾಪ್ತಿಯು ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿರುತ್ತದೆ.
	3.	ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಹೆಸರು ಮತ್ತು ಅವಧಿ.	ಶ್ರೀಮತಿ.ಹೆಚ್.ಎನ್. ಹೇಮಾ ವ್ಯವಸ್ಥಾಪಕ ನಿರ್ದೇಶಕರು, (ಜಂಟಿ ನಿರ್ದೇಶಕರು, ತೋಟಗಾರಿಕೆ ಇಲಾಖೆ), ದಿನಾಂಕ : 22-09-2017 ರಿಂದ ತಹಲ್‌ವರೆಗೆ
	4.	ಸಂಘದ ಅಧ್ಯಕ್ಷರ ಹೆಸರು ಅವಧಿ.	ಶ್ರೀ ಬಸವರಾಜ್ ಆರ್. ಪಾಟೀಲ್, ಅಧ್ಯಕ್ಷರು, ದಿನಾಂಕ : 06-11-2015 ರಿಂದ 25-10-2020ರವರೆಗೆ, ಶ್ರೀ ಹೆಚ್.ಎಸ್. ಶಿವಕುಮಾರ್, ಆಡಳಿತಾಧಿಕಾರಿಗಳು, ತೋಟಗಾರಿಕೆ ಅಪರ ನಿರ್ದೇಶಕರು (ಕ್ಷೇತ್ರ & ನರ್ಸರಿ), ಲಾಲ್‌ಬಾಗ್, ಬೆಂಗಳೂರು. ದಿನಾಂಕ: 26-10-2020 ರಿಂದ 28-02-2021ರವರೆಗೆ ಡಾ. ಬಿ.ಡಿ. ಭೂಕಾಂತ, ಅಧ್ಯಕ್ಷರು, ದಿನಾಂಕ : 01-03-2021 ರಿಂದ ತಹಲ್‌ವರೆಗೆ
2.		**ಹಿಂದಿನ ಸಾಲಿನ ಲೆಕ್ಕಪರಿಶೋದನೆ ನಡೆಸಿದ ಸಂಸ್ಥೆ / ಅಧಿಕಾರಿಯ ವಿವರ.**	
	1.	ಹೆಸರು, ವಿಳಾಸ.	ಶ್ರೀ ಟಿ. ಜಯಂತ್ ಹೆಗಡೆ, ಜೆ.ಟಿ. ಹೆಗಡೆ ಅಂಡ್ ಕಂಪನಿ, ಬೆಂಗಳೂರು.

	2.	ಹುದ್ದೆ	ಸನ್ನದು ಲೆಕ್ಕ ಪರಿಶೋಧಕರು, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು.
	3.	ಅವಧಿ	ದಿನಾಂಕ : 01-04-2019 ರಿಂದ 31-03-2020 ರವರೆಗೆ 2019-20 ನೇ ಸಾಲುಗಳು.
3.		**ಪ್ರಸಕ್ತ ಸಾಲಿನ ಲೆಕ್ಕಪರಿಶೋಧನೆ ಪೂರೈಸಿದ ಸಂಸ್ಥೆ / ಸಹಾಯಕರಾಗಿ ಕಾರ್ಯನಿರ್ವಹಿಸಿದ ವ್ಯಕ್ತಿಗಳ ವಿವರಗಳು.**	
	1.	ಹೆಸರು, ವಿಳಾಸ.	ಶ್ರೀ. ಟಿ. ಜಯಂತ್ ಹೆಗಡೆ ಜೆ.ಟಿ. ಹೆಗಡೆ ಅಂಡ್ ಕಂಪನಿ, ಬೆಂಗಳೂರು.
	2.	ಹುದ್ದೆ	ಸನ್ನದು ಲೆಕ್ಕ ಪರಿಶೋಧಕರು (ಚಾರ್ಟೆಡ್ ಅಕೌಂಟೆಂಟ್)
	3.	ಅವಧಿ	ದಿನಾಂಕ : 01-04-2020 ರಿಂದ 31-03-2021 2020-21 ನೇ ಸಾಲು.
	4.	ಆದೇಶ ಸಂಖ್ಯೆ------- ದಿನಾಂಕ: ----------	ವ್ಯವಸ್ಥಾಪಕ ನಿರ್ದೇಶಕರು, ಕೆ.ಹೆಚ್.ಎಫ್. ರವರ ಆದೇಶ ಪತ್ರ ಸಂ. ಕೆ.ಹೆಚ್.ಎಫ್./ವಿನಿ-2/16/2020-21, ದಿನಾಂಕ : 28-10-2020.
4.		**ಸಂಘದ ಲೆಕ್ಕಪುಸ್ತಕಗಳನ್ನು ಹಾಜರುಪಡಿಸಿದವರ ವಿವರ.**	
	1.	ಹೆಸರು	ಶ್ರೀಮತಿ.ಹೆಚ್.ಎನ್. ಹೇಮಾ, ವ್ಯವಸ್ಥಾಪಕ ನಿರ್ದೇಶಕರು. ಶ್ರೀಮತಿ. ಸುಜಾತ, ಲೆಕ್ಕಿಗರು.
	2.	ಹುದ್ದೆ	ವ್ಯವಸ್ಥಾಪಕ ನಿರ್ದೇಶಕರು ಲೆಕ್ಕಿಗರು - ದ್ವಿತೀಯ ದರ್ಜೆ ಸಹಾಯಕರು
	3.	ದಿನಾಂಕ	21-06-2021 ರಿಂದ 20-07-2021
5.		**ಲೆಕ್ಕಪರಿಶೋಧನಾ ಅವಧಿ.**	
	1.	ಪ್ರಾರಂಭಿಸಿದ ದಿನಾಂಕ:	21-06-2021
	2.	ಮುಕ್ತಾಯ ಮಾಡಿದ ದಿನಾಂಕ	20-07-2021
	3.	ಲೆಕ್ಕಪರಿಶೋಧನೆಗೆ ತೆಗೆದುಕೊಂಡ ದಿನಗಳು.	15 ದಿನಗಳು.
6.		**ಲೆಕ್ಕಪರಿಶೋಧನಾ ಅವಧಿಗೆ ಕಾರ್ಯನಿರ್ವಹಿಸಿದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯ ಮತ್ತು ಅಧ್ಯಕ್ಷರ ಹೆಸರು.**	ಶ್ರೀಮತಿ. ಹೆಚ್.ಎನ್. ಹೇಮಾ, ವ್ಯವಸ್ಥಾಪಕ ನಿರ್ದೇಶಕರು. ಶ್ರೀ ಬಸವರಾಜ್ ಆರ್. ಪಾಟೀಲ್, ಅಧ್ಯಕ್ಷರು, (ದಿ : 06-11-2015 ರಿಂದ ದಿ: 25-10-2020ರವರೆಗೆ) ಶ್ರೀ ಹೆಚ್.ಎಸ್. ಶಿವಕುಮಾರ್, ಆಡಳಿತಾಧಿಕಾರಿಗಳು, ತೋಟಗಾರಿಕೆ ಅಪರ ನಿರ್ದೇಶಕರು (ಕ್ಷೇತ್ರ & ನರ್ಸರಿ), ಲಾಲ್‌ಬಾಗ್, ಬೆಂಗಳೂರು. (ದಿ: 26-10-2020 ರಿಂದ 28-02-2021ರವರೆಗೆ)

J T HEGDE & CO BENGALURU FRN. 014704S Chartered Accountants

			ಡಾ. ಬಿ.ಡಿ. ಭೂಕಾಂತ, ಅಧ್ಯಕ್ಷರು, (ದಿ: 01-03-2021 ರಿಂದ 31-03-2021ರವರೆಗೆ)
7.		ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡ ಬಗ್ಗೆ. 1. ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಸಲ್ಲಿಸಿದ್ದಾರೆಯೇ? ಸಲ್ಲಿಸಿದ್ದಲ್ಲಿ ಪತ್ರ ಸಂಖ್ಯೆ.-------- ದಿನಾಂಕ: ---------- 2. ಗಂಭೀರ ಸ್ವರೂಪದ ಆಕ್ಷೇಪಣೆಗಳು ಹಿಂದಿನ ಸಾಲಿನಿಂದ ಮುಂದುವರೆದಿದ್ದರೆ ಕೆಳಗಿನ ನಮೂನೆಯಲ್ಲಿ ವಿವರಿಸುವುದು.	ದಿನಾಂಕ: 20.10.2020 ರಂದು ನಡೆದ ವಾರ್ಷಿಕ ಮಹಾಸಭೆಯಲ್ಲಿ 2019-20 ನೇ ಸಾಲಿನ ಆಡಿಟ್ ವರದಿಗೆ ಅನುಪಾಲನಾ ವರದಿ ತಯಾರಿಸಿ ಪರಿಶೀಲಿಸಿ ಅಂಗೀಕರಿಸಿ ಪತ್ರ ಸಂ.ಕೆ.ಹೆಚ್.ಎಫ್./ವಿನಿ2/25/2019-20, ದಿನಾಂಕ : 08.12.2020 ರಂದು ಇಲಾಖೆಗೆ ಸಲ್ಲಿಸಲಾಗಿದೆ. ನಮಗೆ ಲಭ್ಯವಾದ ಮಾಹಿತಿ ಮತ್ತು ದಾಖಲೆಗಳ ಆಧಾರದಲ್ಲಿ, ಯಾವುದೇ ಗಂಭೀರಸ್ವರೂಪದ ಆಕ್ಷೇಪಣೆಗಳು ಇರುವುದಿಲ್ಲ

ಕ್ರ.ಸಂ.	ವರದಿ ವರ್ಷ	ಪುಟ ಸಂಖ್ಯೆ.	ಕಂಡಿಕೆ ಸಂಖ್ಯೆ	ನ್ಯೂನ್ಯತೆಗಳ ಸಂಕ್ಷಿಪ್ತ ವಿವರ	ಷರಾ
1	2013-14 ರಿಂದ 2019-20	12	20(2)	ಆರ್.ಕೆ.ವಿ.ವೈ. ಯೋಜನೆಯಡಿ ಮಂಜೂರಾದ ಅನುದಾನದ ಪೈಕಿ ರೂ.549/- ಬಾಕಿ ಇದ್ದು, ಸೂಕ್ತ ಹೊಂದಾಣಿಕೆಯೊಂದಿಗೆ ಬಳಸಿಕೊಳ್ಳಲು ಕ್ರಮವಿಡತಕ್ಕದ್ದು.	ಕಂಡಿಕೆ ಸಂ.20 (2) ರಂತೆ

8.		ಸಂಘದಲ್ಲಿ ನೋಂದಣಿ ಪ್ರಮಾಣ ಪತ್ರ, ಅನುಮೋದಿತ ಉಪನಿಯಮದ ಪ್ರತಿ ಹಾಗೂ ಸಹಕಾರ ಸಂಘಗಳ ಕಾನೂನು ಪುಸ್ತಕ ಹಾಜರಿರುವ ಬಗ್ಗೆ.	ಸಂಘದಲ್ಲಿ ನೋಂದಣಿ ಪ್ರಮಾಣ ಪತ್ರ, ಅನುಮೋದಿತ ಉಪನಿಯಮದ ಪ್ರತಿ ಹಾಗೂ ಸಹಕಾರ ಸಂಘಗಳ ಕಾನೂನು ಪುಸ್ತಕಗಳನ್ನು ಹಾಜರಿಪಡಿಸಿರುತ್ತಾರೆ.
9.		ಸಹಕಾರ ಕಾಯ್ದೆ ಕಾನೂನಿನ ಉಲ್ಲಂಘನೆ ಹಾಗು ಬೈಲಾದ ಉಲ್ಲಂಘನೆ ಇದ್ದಲ್ಲಿ ಸಂಕ್ಷಿಪ್ತವಾಗಿ ವಿವರಿಸಿ.	ಕಾಯ್ದೆ, ನಿಯಮ, ಬೈಲಾ ಉಲ್ಲಂಘನೆ ಬಗ್ಗೆ ಆಯಾ ಕಲಂಗಳಲ್ಲಿ ವಿವರಿಸಲಾಗಿದೆ.
10.		ಆಂತರಿಕ ಲೆಕ್ಕಪರಿಶೋಧನೆ ಹಾಗೂ ಸದರಿ ವರದಿಯ ಪರಿಶೀಲನೆ ಹಾಗೂ ಅನುಸರಣೆ ಆಗಿದೆಯೇ?	ಆಂತರಿಕ ಲೆಕ್ಕ ಪರಿಶೋಧನೆ ವ್ಯವಸ್ಥೆ ಇರುವುದಿಲ್ಲ ಕ್ರಮ ಅಗತ್ಯ.

ಭಾಗ – II

11.		ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಲಾದ ಲೆಕ್ಕಪುಸ್ತಕಗಳ ವಿವರ.	ನಗದು ಪುಸ್ತಕ, ಜನರಲ್ ಲೆಡ್ಜರ್, ಜಮಾ ರಸೀದಿಗಳು, ಓಚರ್‌ಗಳು, ಬ್ಯಾಂಕ್ ತಃಖ್ತೆಗಳು, ಪಾಸ್‌ಪುಸ್ತಕಗಳು, ಕುಳುವಾರು ತಃಖ್ತೆಗಳು.
12.		**ಸದಸ್ಯತ್ವ:**	
	1.	ವರ್ಷಾರಂಭಕ್ಕೆ ಇದ್ದ ಸದಸ್ಯರ ಸಂಖ್ಯೆ.	2018–19: 23 / 2019–20: 23 / 2020–21: 23
	2.	ವರದಿ ಸಾಲಿನಲ್ಲಿ ಹೊಸದಾಗಿ ಸದಸ್ಯತ್ವ ಪಡೆದವರ ಸಂಖ್ಯೆ.	– / – / 01
	3.	ವರದಿ ಸಾಲಿನಲ್ಲಿ ಕಡಿಮೆಯಾದ ಸದಸ್ಯರ ಸಂಖ್ಯೆ.	– / – / –
	4.	ವರ್ಷಾಂತ್ಯಕ್ಕೆ ಬಾಕಿ	23 / 23 / 24
	5.	31–03–2021 ಕ್ಕೆ ಇದ್ದ ಸದಸ್ಯರ ಸಂಖ್ಯೆ (ವರ್ಷಾಂತ್ಯಕ್ಕೆ ಇದ್ದ ಸದಸ್ಯರ ಪಟ್ಟಿ ತಯಾರಿಸಿ ಇಡಲಾಗಿದೆಯೇ?) ಕಳೆದ 02 ಸಾಲುಗಳ ಹೋಲಿಕೆಯಂತೆ.	24 ಸದಸ್ಯರು ಸದಸ್ಯರ ಕುಳುವಾರು ಪಟ್ಟಿ ಲಗತ್ತಿಸಿದೆ.
	6.	ಸದಸ್ಯರ ರಿಜಿಸ್ಟರ್ ಇಟ್ಟು ಎಲ್ಲಾ ಮಾಹಿತಿ ನಮೂದಿಸಲಾಗಿದೆಯೇ?	ಹೌದು ಸದಸ್ಯರ ರಿಜಿಸ್ಟಾರ್ ಬರೆದಿಡಲಾಗಿದೆ.
	7.	ಸದಸ್ಯತ್ವವು ಪೋಟನಿಯಮ ಸಹಕಾರಿ ಕಾಯಿದೆ ಕಾನೂನುಗಳ ಅನುಗುಣವಾಗಿದೆಯೇ?	ಹೌದು
	8.	ಸಂಘದ ಕಾರ್ಯಕ್ಷೇತ್ರ ಮೀರಿ ವಾಸಿಸುತ್ತಿರುವವರನ್ನು ಸದಸ್ಯರನ್ನಾಗಿ ಮಾಡಿಕೊಳ್ಳಲಾಗಿದೆಯೇ?	ಇಲ್ಲ.
13.		**ಷೇರು ಬಂಡವಾಳ:**	
	1.	ಷೇರು ಬಂಡವಾಳ ಮತ್ತು ಪ್ರತಿ ಷೇರಿನ ಬೆಲೆ.	ದಿನಾಂಕ : 31–03–2021 ಕ್ಕೆ ರೂ.12.00 ಲಕ್ಷ ಷೇರು ಬಂಡವಾಳ ಇರುತ್ತದೆ. ಪ್ರತಿ ಷೇರಿನ ಬೆಲೆ ರೂ.10,000/– ಇರುತ್ತದೆ. (ಕನಿಷ್ಟ 5 ಷೇರು) ರೂ.50,000/– ಹೊಂದಿರಬೇಕು.

J T HEGDE & CO BENGALURU FRN: 014704S Chartered Accountants

	2.	ವರ್ಷಾರಂಭಕ್ಕೆ ಇದ್ದ ಸಂದಾಯವಾದ ಷೇರು ಬಂಡವಾಳದ ಮೊತ್ತ.	2018–19 11,50,000 / 2019–20 11,50,000 / 2020–21 11,50,000
	3.	ವರದಿ ಸಾಲಿನಲ್ಲಿ ಸಂದಾಯದ ಮೊತ್ತ.	– / – / 50,000
	4.	ವರದಿ ಸಾಲಿನಲ್ಲಿ ಸದಸ್ಯರಿಗೆ ಮರುಪಾವತಿಸಿದ ಒಟ್ಟು ಷೇರಿನ ಮೊತ್ತ.	– / – / –
	5.	31–3–2021 ಕ್ಕೆ ಸಂದಾಯವಾದ ಷೇರು ಬಂಡವಾಳ (ಕಳೆದ ಎರಡು ಸಾಲಿನ ಹೋಲಿಕೆಯೊಂದಿಗೆ)	11,50,000 / 11,50,000 / 12,00,000
	6.	ಅಪೂರ್ಣ ಷೇರುಗಳಿದ್ದಲ್ಲಿ ಕೈಗೊಂಡ ಕ್ರಮ.	ಇಂತಹ ಪ್ರಕರಣಗಳಿರುವುದಿಲ್ಲ.
	7.	ಸದಸ್ಯರಿಗೆ ಷೇರು ಸರ್ಟಿಫಿಕೇಟ್ ಪೂರೈಸಲಾಗಿದೆಯೇ?	ಪೂರೈಸಲಾಗಿದೆ.
	8.	ಸಂದಾಯವಾದ ಷೇರು ಬಂಡವಾಳ ಹಾಗೂ ಮರುಪಾವತಿಯು ನಿಯಮಗಳ ಅನುಗುಣವಾಗಿದೆಯೇ ನ್ಯೂನತೆಗಳು ಕಂಡುಬಂದಲ್ಲಿ ಸ್ಪಷ್ಟವಾಗಿ ನಮೂದಿಸುವುದು.	ನಿಯಮಗಳಿಗನುಗುಣವಾಗಿದೆ.
	9.	ವ್ಯಕ್ತಿಗತ ಷೇರು ಖಾತೆ ಪುಸ್ತಕ ಬರೆದಿಡಲಾಗಿದೆಯೇ?	ಬರೆದಿಡಲಾಗಿದೆ
	10.	ಅಢಾವೆಯಲ್ಲಿಯ ಸಂದಾಯವಾದ ಷೇರು ಬಂಡವಾಳದ ಮೊತ್ತ ವ್ಯಕ್ತಿಗತ ಷೇರು ಖಾತೆಯ ಕುಳುವಾರು ಒಟ್ಟು ಮೊತ್ತಕ್ಕೆ (ಬ್ಯಾಲೆನ್ಸ್ ರಿಜಿಸ್ಟಾರಿಗೆ) ತಾಳೆ ಇದೆಯೇ? ಅಂತರವಿದ್ದಲ್ಲಿ ಮೊತ್ತ ಮತ್ತು ಸದರಿ ಅಂತರ ಯಾವ ಅವಧಿಯಿಂದ ಮುಂದುವರೆದಿದೆ.	ಷೇರು ಕುಳುವಾರು ತಯಾರಿಸಿ ಹಾಜರು ಪಡಿಸಿದ್ದು ತಾಳೆ ಇದೆ ವರದಿಗೆ ಲಗತ್ತಿಸಿದೆ.
	11.	ಸರಕಾರದ ಷೇರು ಧನವಿದ್ದಲ್ಲಿ ಮಂಜೂರಾತಿ ಆದೇಶ ಸಂಖ್ಯೆ ದಿನಾಂಕ ಮರುಪಾವತಿಗಳು ಷರತ್ತಿನಂತೆ ಪಾವತಿಸ ಲಾಗಿದೆಯೇ?	ಸರ್ಕಾರದಿಂದ ಷೇರುಧನ ಮಂಜೂರಾಗಿಲ್ಲ.
	12.	ಸರಕಾರದ ಷೇರು ಧನದ ಮೇಲೆ ಪಾವತಿಸಿದ ಡಿವಿಡೆಂಡ್ ವಿವರ.	ಅನ್ವಯಿಸುವುದಿಲ್ಲ.

J T HEGDE & CO Chartered Accountants BENGALURU FRN: 014704S

14.		**ಪಾವತಿಯಾದ ಷೇರು ಬಂಡವಾಳ:** ಸಂಸ್ಥೆಗಳು ರಾಜ್ಯ ಸರ್ಕಾರ ಬಿಡಿ ಸದಸ್ಯರು ಅಸೋಸಿಯೇಟ್ ಸದಸ್ಯರು. 1. ಸರ್ಕಾರದ ಷೇರು ಧನ ಕುರಿತಂತೆ ಮಂಜೂರಾತಿ ಆದೇಶ ಮತ್ತು ಮರುಪಾವತಿಯ ಕಂತುಗಳ ಷರತ್ತು ಇತ್ಯಾದಿ. 2. ಕುಳುವಾರು ಪಟ್ಟಿ ತಯಾರಿಸಿದ್ದಾರೆಯೇ? ತಾಳೆ ಯಾಗಿದೆಯೇ ?	ವರ್ಷರಂಭಕ್ಕೆ / ವರದಿ ಸಾಲಿನಲ್ಲಿ ಜಮಾ / ವರದಿ ಸಾಲಿನಲ್ಲಿ ಖರ್ಚು. / ವರ್ಷಾಂತ್ಯಕ್ಕೆ ಬಾಕಿ – / – / – / – – / – / – / – 11,50,000 / 50,000 / – / 12,00,000 – / – / – / – ಸರ್ಕಾರದಿಂದ ಷೇರುಧನ ಮಂಜೂರಾಗಿರುವುದಿಲ್ಲ. ಸದಸ್ಯರ ಷೇರು ಕುಳುವಾರು ಪಟ್ಟಿ ತಯಾರಿಸಿ ಹಾಜರುಪಡಿಸಿದ್ದು ತಾಳೆ ಇರುತ್ತದೆ. ವರದಿಗೆ ಲಗತ್ತಿಸಿದೆ.
15.		**ಆಪದ್ಧನ ನಿಧಿ :** 1. ಸಾಲು ಪ್ರಾರಂಭದಲ್ಲಿದ್ದ ಮೊಬಲಗು 2. ಪ್ರಸಕ್ತ ಸಾಲಿನಲ್ಲಿ ಜಮಾ ಆದ ಮೊಬಲಗು 3. ಸಾಲಾಖೈರಿಗೆ ಉಳಿದ ಮೊಬಲಗು 4. ಸಹಕಾರಿ ಸಂಘಗಳ ನಿಯಮ 23 ರಂತೆ ಪ್ರತ್ಯೇಕವಾಗಿ ಗುಂತಾಯಿಸಿದ ಮೊಬಲಗು. 5. ಪ್ರತ್ಯೇಕವಾಗಿ ಗುಂತಾಯಿಸದೆ ಇದ್ದಲ್ಲಿ ಸಹಕಾರ ಸಂಘಗಳ ನಿಬಂಧಕರ ಅನುಮತಿ ಪಡೆದಿದ್ದಾರೆಯೇ? 6. ಗುಂತಾಯದ ಮೇಲಿನ ಬಡ್ಡಿ ಸಾಲಾಖೈರಿಗೆ ಸಂಘಕ್ಕೆ ಜಮಾ. ಆಗಿದೆಯೇ? ಇಲ್ಲದಿದ್ದಲ್ಲಿ ಅವಧಿ ಸಮೇತ ಕಾರಣ ತಿಳಿಸಿ.	ರೂ. 14,62,350–00 ರೂ. 2,27,294–00 ರೂ. 16,89,644–00 ರೂ. 16,72,145–00 ಗಳನ್ನು ಪ್ರತ್ಯೇಕ ಠೇವಣಿ ಇಡಲಾಗಿದೆ. ರೂ.17,499–00 ಕಡಿಮೆ ಗುಂತಾವಣೆ ಮಾಡಿದ್ದು ನಿಬಂಧಕರ ಅನುಮತಿ ಪಡೆದಿಲ್ಲ. ಈ ಆಪದ್ಧನ ನಿಧಿಯನ್ನು ಕೂಡಲೇ ಪ್ರತ್ಯೇಕ ಠೇವಣಿಯಲ್ಲಿ ಇಡಲು ಕಾಯಿದೆ ನಿಯಮದ ಪ್ರಕಾರ ಕ್ರಮ ಅಗತ್ಯ. ಗುಂತಾವಣೆ ಡಿಪಾಜಿಟ್‌ಗಳ ಮೇಲೆ ಆಡಿಟ್ ಅವಧಿಯಲ್ಲಿ ರೂ.1,01,082–00 ಬಡ್ಡಿ ಜಮಾ ಆಗಿರುತ್ತದೆ.
16.		**ಇತರೆ ನಿಧಿಗಳು:**	
		1. ಉಪನಿಯಮಗಳ ಅವಕಾಶಗಳಿಗೆ ಒಳಪಟ್ಟು ವಿವಿಧ ರೀತಿಯ ನಿಧಿಗಳನ್ನು ರಚಿಸಿಕೊಳ್ಳಲಾಗಿದೆಯೇ? 2. ನಿಧಿಗಳ ವಿನಿಯೋಗದ ಬಗ್ಗೆ ಉಪನಿಯಮಗಳನ್ನು ರಚಿಸಿಕೊಂಡು ನಿಬಂಧಕರ ಮಂಜೂರಾತಿ ಪಡೆದಿದ್ದಾರೆಯೇ?	ಹೌದು ಬೈಲಾ ನಂ.34 ರ ಅವಕಾಶಗಳಿಗೊಳಪಟ್ಟು ಇತರೆ ನಿಧಿಗಳನ್ನು ರಚಿಸಿಕೊಳ್ಳಲಾಗಿದೆ. ದಿನಾಂಕ : 31–03–2021 ಕ್ಕೆ ರೂ.51,81,806–00 ಇತರೆ ನಿಧಿಗಳಿರುತ್ತದೆ. ನಿಧಿಗಳ ವಿನಿಯೋಗದ ಬಗ್ಗೆ ಉಪನಿಯಮಗಳನ್ನು ರಚಿಸಿಕೊಂಡು ನಿಬಂಧಕರಿಂದ ಮಂಜೂರಿ ಪಡೆದಿಲ್ಲ. ಕ್ರಮ ಅಗತ್ಯ.

K.H.F.

J T HEGDE & CO BENGALURU FRN: 014704S Chartered Accountants

	3. ವರದಿ ಸಾಲಿನಲ್ಲಿ ನಿಧಿಗಳ ವಿನಿಯೋಗ ಮಾಡಿದ್ದಲ್ಲಿ ಅವು ಕ್ರಮಬದ್ಧವಾಗಿದೆಯೇ?	ವರದಿ ಸಾಲಿನಲ್ಲಿ ಲಾಭ ವಿಭಾಗಣೆಯಿಂದ ರೂ.6,68,245-00 ಇತರೆ ನಿಧಿಗಳಿಗೆ ಜಮಾ ಬಂದಿದ್ದು, ಪ್ರತ್ಯೇಕ ಠೇವಣಿ ಮಾಡಲಾಗಿದೆ.
	4. ವರ್ಷಾಂತ್ಯಕ್ಕೆ ಇದ್ದ ನಿಧಿಗಳನ್ನು ಪ್ರತ್ಯೇಕವಾಗಿ ಗುಂತಾಯಿಸಲಾಗಿದೆಯೇ?	ಎಲ್ಲಾ ಇತರೆ ನಿಧಿಗಳನ್ನು ಆಯಾ ಶೀರ್ಷಿಕೆವಾರು ಉದ್ದೇಶಕ್ಕನುಗುಣವಾಗಿ ಉಪಯೋಗಿಸಿಕೊಳ್ಳಲು ಅನುಕೂಲವಾಗುವಂತೆ ಭಾಗಶಃ ಅಪೆಕ್ಸ್ ಬ್ಯಾಂಕ್‌ನಲ್ಲಿ ಶೀರ್ಷಿಕೆವಾರು ಪ್ರತ್ಯೇಕ ಠೇವಣಿ ಮಾಡಲಾಗಿದೆ. ಬ್ಯಾಂಕ್‌ನಲ್ಲಿ ಹಿಂದೆ ಇದ್ದ ಠೇವಣಿಗಳನ್ನು ಬಡ್ಡಿ ಸಮೇತ ನವೀಕರಣ ಇಟ್ಟಿರುವುದರಿಂದ ಕೆಲವೊಂದು ಹೆಚ್ಚು ಕಡಿಮೆ ಠೇವಣಿ ಮಾಡಲಾಗಿದೆ. ಜವಾಬ್ದಾರಿ ಕಡೆ ಇರುವ ಮೊಬಲಗಿಗೆ ತಾಳೆಯಾಗುವಂತೆ ಠೇವಣಿ ಮಾಡಲು ಕ್ರಮ ಅಗತ್ಯ.
	5. ಶಿಕ್ಷಣ ನಿಧಿಯನ್ನು ನಿಯಮಗಳ ಅನುಸಾರ ಪಾವತಿಸಿದೆಯೇ?	ಶಿಕ್ಷಣ ನಿಧಿಯನ್ನು ಸಹಕಾರ ಮಹಾಮಂಡಳಕ್ಕೆ ಪಾವತಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಬಾಕಿ ಇರುವುದಿಲ್ಲ.
17.	<u>ಸಾಲಗಳು:</u>	
	1. ಸರ್ಕಾರದ ಸಾಲ ಪಡೆಯಲಾಗಿದೆಯೇ? ಅದರ ಉದ್ದೇಶ, ವಿನಿಯೋಗ ಮುರುಪಾವತಿ, ಪಾವತಿಸಲು ಬಾಕಿ ಇರುವ ಬಡ್ಡಿ ಅವಕಾಶ, ವರ್ಷಾಂತ್ಯಕ್ಕೆ ಬಾಕಿ ಕುರಿತು ದೃಢೀಕರಣ ಪತ್ರ ಪಡೆದ ಬಗ್ಗೆ ಮತ್ತು ಮುದ್ದತ್ತು ಮೀರಿದ ಸಾಲದ ಬಗ್ಗೆ ವಿವರಣೆ.	ಮಹಾಮಂಡಳವು ಸರ್ಕಾರದಿಂದ ಯಾವುದೇ ರೀತಿಯ ಸಾಲ ಪಡೆದಿರುವುದಿಲ್ಲ.
	2. ಬ್ಯಾಂಕುಗಳಿಂದ ಪಡೆದ ಸಾಲ ಅದರ ಉದ್ದೇಶ, ವಿನಿಯೋಗ, ಸಾಲದ ಮರುಪಾವತಿ, ಮೊಬಲಗು, ಬಾಕಿ ಬಗ್ಗೆ ದೃಢೀಕರಣ ಪತ್ರ ಕುರಿತು ವಿವರಣೆ. ಮುದ್ದತ್ತಿ ಮೀರಿದ ಸಾಲದ ವಿವರ.	ಮಹಾಮಂಡಳವು ಬ್ಯಾಂಕ್‌ಗಳಿಂದ ಯಾವುದೇ ರೀತಿಯ ಸಾಲ ಪಡೆದಿಲ್ಲ.
	3. ವರ್ಷಾಂತ್ಯಕ್ಕೆ ಸಾಲಗಳ ಮೇಲೆ ಕೊಡಬೇಕಾದ ಬಡ್ಡಿ ಕಾಯ್ದಿರಿಸಿದ ಬಗ್ಗೆ.	ಅನ್ವಯಿಸುವುದಿಲ್ಲ.
18.	**ಸರ್ಕಾರದಿಂದ ಪಡೆದ ಸಹಾಯಧನ ಕುರಿತಂತೆ ವಿವರಣೆ.**	
	1. ಮಂಜೂರಾದ ಮೊತ್ತ ಹಾಗೂ ಉದ್ದೇಶ, ಉಪಯೋಗಿಸಿದ ರೀತಿ ಇತ್ಯಾದಿ ವಿವರಣೆ.	1. ಮಹಾಮಂಡಳಕ್ಕೆ ಮಂಜೂರಾದ ಸರ್ಕಾರದ ಸಹಾಯಧನ ಇರುವುದಿಲ್ಲ.
	2. ಸಂಘವು ವರದಿ ಸಾಲಿನಲ್ಲಿ ಕೇಂದ್ರ/ರಾಜ್ಯ ಸರ್ಕಾರಗಳಿಂದ ಬಡ್ಡಿ, ಸಹಾಯ ಧನವನ್ನು	2. ಅನ್ವಯಿಸುವುದಿಲ್ಲ.

J.T. HEGDE & CO. BENGALURU FRN: 014704S Chartered Accountants

	ಪಡೆದಿರುತ್ತದೆಯೇ? ಪಡೆದಿದ್ದಲ್ಲಿ, ಅದು ಸರ್ಕಾರದ ಆದೇಶಕ್ಕನುಗುಣ ವಾಗಿದೆಯೇ? ವಿವರಗಳನ್ನು ನಮೂದಿಸುವುದು (ಅನ್ವಯ ವಾಗುವಲ್ಲಿ ಮಾತ್ರ)	
19.	**ಠೇವಣಾತಿಗಳು:** 1. ಸಂಘವು ಹೊಂದಿರುವ ಠೇವಣಿಗಳ ವಿವರ. 2. ಠೇವಿನ ವ್ಯವಹಾರ ಕುರಿತು ಸೂಕ್ತ ಉಪನಿಯಮ ರಚಿಸಿಕೊಂಡು ಮಂಜೂರಿ ಪಡೆದಿರುವರೆ ? 3. ಸದಸ್ಯರಲ್ಲದವರಿಂದ ಠೇವಣಿಸ್ವೀಕರಿಸಲಾಗಿದೆಯೇ? ಎಷ್ಟು ವ್ಯಕ್ತಿಗಳಿಂದ ಒಟ್ಟು ಎಷ್ಟು ಮೊತ್ತದ ಠೇವು ಪಡೆಯಲಾಗಿದೆ. 4. ಠೇವಿನ ಮೇಲೆ ಪಾವತಿಸುತ್ತಿರುವ ಬಡ್ಡಿ ದರಗಳು ಆಡಳಿತ ಮಂಡಳಿ ನಿರ್ಧರಿಸಿರುವ ತೀರ್ಮಾನಕ್ಕೆ ಅನುಗುಣವಾಗಿದೆಯೇ ? 5. ವರದಿ ಸಾಲಿನ ಅಂತ್ಯಕ್ಕೆ ಠೇವಣಿಗಳಲ್ಲಿ ಆದ ಹೆಚ್ಚು ಕಡಿಮೆ ಮೊತ್ತ. 6. ಠೇವಣಿದಾರರಿಗೆ ಪಾಸ್ ಪುಸ್ತಕ ನೀಡಲಾಗಿದೆಯೇ? 7. ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ಕೊಟ್ಟಿದೆಯೇ? **ಠೇವಣಾತಿಗಳ ಸ್ವರೂಪ:**	ಮಹಾಮಂಡಳವು ಸದಸ್ಯರು ಅಥವಾ ಸದಸ್ಯರಲ್ಲದವರಿಂದ ಠೇವಣಿಗಳನ್ನು ಸ್ವೀಕರಿಸುತ್ತಿಲ್ಲ. ಕಾರಣ ಅನ್ವಯಿಸುವುದಿಲ್ಲ. _"_ _"_ _"_ _"_ _"_

ಆರಂಭ ಬಾಕಿ	ಪ್ರಸಕ್ತ ಸಾಲಿನ ಜಮಾ	ಪ್ರಸಕ್ತ ಸಾಲಿನ ಖರ್ಚು	ವರ್ಷಾಂತ್ಯಕ್ಕೆ ಬಾಕಿ	ಒಟ್ಟು
–	–	–	–	–

ಒಟ್ಟು ಠೇವುಗಳ ಕಳೆದ 02 ವರ್ಷಗಳ ಅಂಕಿ ಗಳೊಂದಿಗೆ ತುಲನಾತ್ಮಕ ವಿವರ:

ಕ್ರ ಸಂ.	ಠೇವಿನ ಸ್ವರೂಪ	ವರ್ಷ		
		2018–19	2019–20	2020–21
1.				
2.				
3.				
	ಒಟ್ಟು			

	8. ಪಿಗ್ಮಿ ಠೇವಿನ ವ್ಯವಹಾರ ಕೈಗೊಂಡಿರುವರೋ?	ಯಾವುದೇ ರೀತಿಯ ಠೇವಣಿಗಳ ವ್ಯವಹಾರ ಇರುವುದಿಲ್ಲ ಕಾರಣ ಅನ್ವಯಿಸುವುದಿಲ್ಲ.
	9. ಪಿಗ್ಮಿ ಏಜೆಂಟರ ಸಂಖ್ಯೆ ಮತ್ತು ನಿಗದಿಪಡಿಸಿದ ಕಮಿಷನ್?	_"_

K.H.F. Bangalore-560023 ಬೆಂಗಳೂರು-23 (R)

J T HEGDE & CO BENGALURU FRN: 014704S Chartered Accountants

	10. ಕೊಡತಕ್ಕ ಬಡ್ಡಿ ಸರಿಯಾಗಿ ಲೆಕ್ಕಚಾರ ಮಾಡಿ ಕಾಯ್ದಿರಿಸಲಾಗಿದೆಯೇ?	–"–
	11. ಎಲ್ಲಾ ಠೇವಣಿಗಳ ವರ್ಷಾಂತ್ಯದ ಕುಳುವಾರು ತಯಾರಿಸಿದೆಯೇ ಹಾಗೂ ತಾಳೆಯಾಗಿದೆಯೇ?	–"–
	12. ಠೇವಣಾತಿಗಳನ್ನು ಮತ್ತು ಅದರ ಮೇಲಿನ ಬಡ್ಡಿ ಪಾವತಿಸುವಾಗ ಐ.ಟಿ. ನಿಯಮಗಳನ್ನು ಪಾಲಿಸಿರುವರೇ?	–"–
	13. ನಗದು ಮೀಸಲು ಮತ್ತು ಪ್ರವಾಹಿ ಧನ ಮಿತಿ ಕಾಯ್ದುಕೊಂಡು ರಿಜಿಸ್ಟರ್ ಬರೆದಿಡಲಾಗಿದೆಯೇ?	–"–

20. <u>ಇತರೆ ಜವಾಬ್ದಾರಿಗಳು:</u>

1. ಸಾಲಾಖೈರಿಗೆ ಕೊಡಬೇಕಾದ ಬಾಡಿಗೆ, ಸಂಬಳ ಇತ್ಯಾದಿ. – ಇಲ್ಲ.
2. ಸಿಬ್ಬಂದಿ ಠೇವಣಿ (ಭದ್ರತಾ ಠೇವಣಿ) – 2,586–00
3. ಇನ್ನಿತರ ಜವಾಬ್ದಾರಿಗಳು ಜಿಲ್ಲಾ ಹಾಪ್‌ಕಾಮ್ಸ್‌ಗಳಿಂದ ಕ್ರೇಟ್ಸ್‌ನ ಶೇಕಡ 50% ರ ಮೊತ್ತ – 18,56,466–50
4. ದಯಾತ್ಮಕ ಕೊಡುಗೆ ಎಕ್ಸ್ ಗ್ರೇಷಿಯಾ – 73,610–00

ದಿನಾಂಕ : 31–03–2021 ಕ್ಕೆ **ರೂ.83,79,592.72** ಗಳು ಈ ಕೆಳಕಂಡಂತೆ ಇತರೆ ಜವಾಬ್ದಾರಿಗಳಿರುತ್ತದೆ.

1.	ನೌಕರರ ಭದ್ರತಾ ಠೇವಣಿ	2,586–00
2.	ಜಿಲ್ಲಾ ಹಾಪ್‌ಕಾಮ್ಸ್‌ಗಳಿಂದ ಕ್ರೇಟ್ಸ್‌ನ ಶೇಕಡ 50% ರ ಮೊತ್ತ	18,56,466–50
3.	ದಯಾತ್ಮಕ ಕೊಡುಗೆ ಎಕ್ಸ್ ಗ್ರೇಷಿಯಾ	73,610–00
	ಒಟ್ಟು	**19,32,662–50**
4.	ಸರ್ಕಾರದ ಅನುದಾನಗಳ ನಿಶ್ಚಿತ ಠೇವಣಿ ಮೇಲಿನ ಬಡ್ಡಿ	
	1. ಕೆನರಾ ಬ್ಯಾಂಕ್ ಎಫ್.ಡಿ. ಬಡ್ಡಿ (10–11 ರಿಂದ 19–20 ಎಸ್–20) (81109)	12,72,072–55
	2. ಕೆನರಾ ಬ್ಯಾಂಕ್ ಎಫ್.ಡಿ. ಬಡ್ಡಿ ಜಮಾ (ಎಸ್–08 & ಎಸ್–07) (2012–13 ರಿಂದ 2020–21 ರ ಠೇವಣಿಗಳ ಮೇಲೆ ಬಂದ ಬಡ್ಡಿ) (84561)	44,73,944–74
	3. ಅನುದಾದನ ಬಡ್ಡಿಯ ಮೇಲಿನ ಟಿ.ಡಿ.ಎಸ್. 2019–20	4,77,107–00
	4. ಅನುದಾದನ ಬಡ್ಡಿಯ ಮೇಲಿನ ಟಿ.ಡಿ.ಎಸ್. 2020–21	2,23,806–00
	ಒಟ್ಟು	**64,46,930–29**
	ಒಟ್ಟು ರೂ.	**83,79,592–79**

1. <u>**ನೌಕರರ ಭದ್ರತಾ ಠೇವಣಿ :–**</u> ಹಿಂದಿನ ವರದಿಯಂತೆ 2001–02 ನೇ ಸಾಲಿನಲ್ಲಿ ಸಂಘದ ಕಾರು ಚಾಲನೆಗಾಗಿ ಶ್ರೀ.ಶಶಿಕುಮಾರ್ ಇವರನ್ನು ಡ್ರೈವರ್ ಆಗಿ ನೇಮಿಸಿಕೊಂಡಿದ್ದು, ಸದರಿಯವರಿಂದ ರೂ.2,586/– ಗಳ ಭದ್ರತಾ ಠೇವಣಿ ಪಡೆದಿದ್ದು, (ಬಡ್ಡಿ ಸೇರಿಸಿ) ಈ ಮೊಬಲಗನ್ನು ಜಿಲ್ಲಾ ಬ್ಯಾಂಕ್ ಸಂಚಿತ ಠೇವಣಿಯಲ್ಲಿ ತೊಡಗಿಸಿದ್ದು, ಠೇವಣಿ ರಸೀದಿ ಸಂಖ್ಯೆ : 12924 ಆಗಿದ್ದು, ಠೇವಣಿ ರಸೀತಿಯನ್ನು ಪರಿಶೀಲನೆಗೆ ಹಾಜರುಪಡಿಸಿರುತ್ತಾರೆ. ಸದರಿ ಠೇವಣಿ ದಿನಾಂಕ : 03–03–2022 ಕ್ಕೆ ಪಕ್ವಗೊಳ್ಳಲಿದೆ.

2. <u>**ಸರ್ಕಾರದ ಅನುದಾನಗಳ ನಿಶ್ಚಿತ ಠೇವಣಿ ಮೇಲಿನ ಬಡ್ಡಿ :–**</u> ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಆರ್.ಕೆ.ವಿ.ವೈ., ಎಸ್–20 ಹಾಗೂ ಎಸ್–07 ಯೋಜನೆಯಡಿ ಹಣ್ಣು ಮತ್ತು ತರಕಾರಿ ತೋಟಗಾರಿಕಾ

ಉತ್ಪನ್ನಗಳನ್ನು ಬೆಳೆಯಲು ಮತ್ತು ಮಾರಾಟ ಮಾಡಲು ವಿವಿಧ ಯೋಜನೆಗಳಡಿ ಅನುದಾನಗಳನ್ನು ಬಿಡುಗಡೆ ಮಾಡಿದ್ದು, ಸದರಿ ಅನುದಾನಗಳು ಅನುಷ್ಠಾನವಾಗುವವರೆಗೆ ಸದರಿ ಬಿಡುಗಡೆಯಾದ ಹಣವನ್ನು ವಿವಿಧ ಬ್ಯಾಂಕ್ ಉಳಿತಾಯ ಖಾತೆಗಳಲ್ಲಿ, ನಿಶ್ಚಿತ ಠೇವಣಿಗಳಲ್ಲಿ ತೊಡಗಿಸಿದ್ದು ಅವುಗಳ ಮೇಲೆ ಬಂದ ಬಡ್ಡಿ ಹಣವನ್ನು ಪ್ರತ್ಯೇಕವಾಗಿ ಜವಾಬ್ದಾರಿಯಲ್ಲಿ ಇಡಲಾಗಿದ್ದು, ಸದರಿ ಮೊಬಲಗು ಸಾಲು ಅಖೈರಿಗೆ ರೂ.57,46,016-00 ಸರ್ಕಾರದ ಅನುದಾನಗಳ ನಿಶ್ಚಿತ ಠೇವಣಿಗಳ ಮೇಲೆ ಬಂದ ಬಡ್ಡಿ ಇದ್ದು, ಪ್ರಸಕ್ತ 2020-21 ನೇ ಸಾಲಿನಲ್ಲಿ ಜಮಾ ಬಂದ ಉಳಿತಾಯ ಹಾಗೂ ನಿಶ್ಚಿತ ಠೇವಣಿಗಳ ಬಡ್ಡಿ ಹಾಗೂ ವಾಪಸ್ಸು ಮಾಡಲಾದ ಬಡ್ಡಿ ಹಾಗೂ ವರ್ಷಾಂತ್ಯಕ್ಕೆ ಉಳಿದ ಬಾಕಿ ವಿವರ ಕೆಳಕಂಡಂತಿರುತ್ತದೆ.

<u>ಸರ್ಕಾರದ ಅನುದಾನದ ಮೇಲೆ ಬ್ಯಾಂಕ್‌ಗಳಿಂದ ಬಂದ ಬಡ್ಡಿಯಲ್ಲಿ ಖರ್ಚು ಮಾಡಲಾದ ಮೊತ್ತ ಕೆಳಕಂಡಂತಿವೆ.</u>

ಕ್ರಮ ಸಂ.	ಯೋಜನೆ ವಿವರ	2019-20 ಕ್ಕೆ ಬಾಕಿ	2020-21 ನೇ ಸಾಲಿನಲ್ಲಿ ಜಮಾ	2020-21 ರಲ್ಲಿ ಖರ್ಚು	31-03-2021 ಕ್ಕೆ ಉಳಿಕೆ
1.	ಎಸ್-07 (84561)	19,08,312-74	44,73,944-74	19,08,312-00	44,73,944-74
2.	ಎಸ್-20 (81109)	8,43,924-55	12,72,072-55	8,43,924-00	12,72,072-55
3.	ಟಿ.ಡಿ.ಎಸ್. ಮೊತ್ತ	-	2,89,300-00	2,89,300-00	-
4.	ಆರ್.ಕೆ.ವಿ.ವೈ. ಬಡ್ಡಿ (84604)	-	41,798-00	41,798-00	-
5.	ಅನುದಾನದ ಬಡ್ಡಿಯ ಮೇಲಿನ ಟಿ.ಡಿ.ಎಸ್. (2019-20)	4,77,105-00	-	-	4,77,105-00
6.	ಅನುದಾನದ ಬಡ್ಡಿಯ ಮೇಲಿನ ಟಿ.ಡಿ.ಎಸ್. (2020-21)	-	2,23,806-00	-	2,23,806-00
	ಒಟ್ಟು	**32,29,344-29**	**63,00,921-29**	**30,83,334-00**	**64,46,930-29**

ಅನುದಾನಗಳನ್ನು ಬ್ಯಾಂಕ್‌ನಲ್ಲಿಟ್ಟ ನಿಶ್ಚಿತ ಠೇವಣಿಗಳ ಮೇಲೆ ಬಂದ ಬಡ್ಡಿ ಸಾಲು ಪ್ರಾರಂಭಕ್ಕೆ ರೂ.32,29,344-29 ಇದ್ದು, ಪ್ರಸಕ್ತ ಸಾಲಿನಲ್ಲಿ ರೂ.63,00,921-29 ಜಮಾ ಬಂದಿದ್ದು, ರೂ.30,83,334-00 ಖರ್ಚು ಮಾಡಿದ್ದು, ಸರ್ಕಾರಕ್ಕೆ ವಾಪಸ್ಸು ಮಾಡಿದ್ದು, ಸೇರಿ ಹೋಗಲಾಗಿ ಸಾಲಾಖೈರಿಗೆ ರೂ.64,46,930-29 ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ವಿವರಸಿರುವಂತೆ ಸರ್ಕಾರದ ಅನುದಾನಗಳ ಎಸ್.ಬಿ. ಮತ್ತು ಎಫ್.ಡಿ. ಮೇಲಿನ ಬಡ್ಡಿ ಜವಾಬ್ದಾರಿಯಲ್ಲಿ ಬಾಕಿ ಇರುತ್ತದೆ.

3. **<u>ಜಿಲ್ಲಾ ಹಾಪ್‌ಕಾಮ್ಸ್‌ಗಳಿಂದ ಶೇ 50% ಕ್ರೇಟ್ಸ್ ನ ಮೊತ್ತ (18,56,466-50) :-</u>** ಸಾಲು ಪ್ರಾರಂಭಕ್ಕೆ ರೂ.10,49,074-50 ಜಮಾ ಬಾಕಿ ಇದ್ದು, ಆಡಿಟ್ ಅವಧಿಯಲ್ಲಿ 2020-21 ನೇ ಸಾಲಿನಲ್ಲಿ ರೂ.62,76,145-00 ಗಳು ಜಮಾ ಬಂದಿದ್ದು, ಕ್ರೇಟ್ಸ್ ಸರಬರಾಜುದಾರರಿಗೆ ರೂ.54,68,753-00 ಗಳನ್ನು ಪಾವತಿಸಿದ್ದು, ದಿನಾಂಕ : 31-03-2021 ಕ್ಕೆ ರೂ.18,56,466-50 ಗಳು ಕೊಡತಕ್ಕ ಜಿಲ್ಲಾ ಹಾಪ್‌ಕಾಮ್ಸ್‌ಗಳ ಶೇ 50% ರ ಕ್ರೇಟ್ಸ್ ನ ಮೊತ್ತ ಹಣ ಜಮಾ ಇರುತ್ತದೆ. ಇದಕ್ಕೆ ಸಂಬಂಧಿಸಿದಂತೆ, ಕ್ರೇಟ್ಸ್ ಗಳನ್ನು ಸರಬರಾಜು ಮಾಡಿ ಲೆಕ್ಕ ಚುಕ್ತ ಮಾಡಲು ಕ್ರಮ ಅಗತ್ಯ.

4. **<u>ದಯಾತ್ಮಕ ಕೊಡುಗೆ ಎಕ್ಸ್‌ಗ್ರೇಷಿಯಾ (ರೂ.73,610-00) :-</u>** ಆಡಿಟ್ ಅವಧಿಯಲ್ಲಿ 2018-19 ನೇ ಸಾಲಿನ ಲಾಭ-ವಿಭಾಗಣೆಯಲ್ಲಿ ರೂ.73,610-00 ಬೈಲಾ ಮತ್ತು ಕಾಯಿದೆಗಳನ್ವಯ ದಯಾತ್ಮಕ ಕೊಡುಗೆ ಎಕ್ಸ್‌ಗ್ರೇಷಿಯಾ ಬಾಬ್ತು ತೆಗೆದಿರಿಸಿದ್ದು, ಸಂಬಂಧಪಟ್ಟ ಸಿಬ್ಬಂಧಿಗೆ ಪಾವತಿಸಲು ಕ್ರಮ ಅಗತ್ಯ.

J.T. HEGDE & CO. BENGALURU FRN: 014704S Chartered Accountants

5. **ಸರ್ಕಾರದ ಅನುದಾನದ ನಿಶ್ಚಿತ ಠೇವಣಿ ಮೇಲೆ ಬಂದ ಬಡ್ಡಿ ಸರ್ಕಾರಕ್ಕೆ ವಾಪಸ್ಸು ಮಾಡತಕ್ಕದ್ದು :**

ಆಡಿಟ್ ಅವಧಿಯಲ್ಲಿ ಕೆನರಾ ಬ್ಯಾಂಕ್ ಎಸ್.ಬಿ. ಖಾತೆ ಸಂಖ್ಯೆ: 81109–ರೂ.12,72,072–55
ಆಡಿಟ್ ಅವಧಿಯಲ್ಲಿ ಕೆನರಾ ಬ್ಯಾಂಕ್ ಎಸ್.ಬಿ. ಖಾತೆ ಸಂಖ್ಯೆ: 84561–ರೂ.44,73,944–74
ಕ್ರೋಡೀಕೃತ ಬಡ್ಡಿ ಜಮಾ ಬಂದಿದ್ದು, ಸದರಿ ಮೊಬಲಗನ್ನು ಸರ್ಕಾರಕ್ಕೆ ಪಾವತಿಸಲು ಕ್ರಮ ಅಗತ್ಯ.

6. **ಸರ್ಕಾರದ ಅನುದಾನದ ನಿಶ್ಚಿತ ಠೇವಣಿ (ಕೆನರಾ ಬ್ಯಾಂಕ್) ಬಡ್ಡಿಯ ಮೇಲೆ ಆದಾಯ ತೆರಿಗೆ ಕಡಿತ ಬಾಬ್ತು (ರೂ.4,77,107–00) :** ಸರ್ಕಾರದ ಅನುದಾನವನ್ನು ಕೆನರಾ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿಯಲ್ಲಿಟ್ಟ ಹಣದ ಮೇಲೆ ಬಂದ ಬಡ್ಡಿಯ ಮೇಲೆ ಆದಾಯ ತೆರಿಗೆ ಬಾಬ್ತು ರೂ.4,77,107–00 ಆದಾಯ ತೆರಿಗೆ ಇಲಾಖೆಯಿಂದ ಬರತಕ್ಕದ್ದು, ಈ ಹಣ ಬಂದ ನಂತರ ರಾಜ್ಯ ಸರ್ಕಾರಕ್ಕೆ ಪಾವತಿಸಬೇಕಾಗಿರುತ್ತದೆ. ಈ ಬಗ್ಗೆ ಆಸ್ತಿ ಕಡೆ ಕೂಡ ಬರತಕ್ಕದ್ದು ಎಂದು ತೋರಿಸಿದ್ದು, ಆದಾಯ ತೆರಿಗೆ ಇಲಾಖೆಯಿಂದ ಹಣ ಬಂದ ನಂತರ ರಾಜ್ಯ ಸರ್ಕಾರಕ್ಕೆ ಕೊಡಬೇಕಾದ ಬಡ್ಡಿಗೆ ಸೇರಿಸಿಕೊಂಡು ಹೊಂದಾಣಿಕೆ ಲೆಕ್ಕ ಬರೆದು ಈ ಶೀರ್ಷಿಕೆಯ ಲೆಕ್ಕ ಮುಕ್ತಾಯ ಮಾಡಿ ಲೆಕ್ಕ ಚುಕ್ತ ಮಾಡಿಕೊಳ್ಳಲು ಕ್ರಮ ಅಗತ್ಯ.

7. **ಅನುದಾನದ ಠೇವಣಿ ಮೇಲಿನ 2020–21ನೇ ಸಾಲಿಗೆ ಬರತಕ್ಕ ಬಡ್ಡಿ (ರೂ.2,23,806–00) :** ಕೆನರಾ ಬ್ಯಾಂಕ್‌ನಲ್ಲಿ ಅನುದಾನಗಳ ನಿಶ್ಚಿತ ಠೇವಣಿಗಳ ಮೇಲೆ ಉದ್ಭವವಾಗಿರುವ ಅಕ್ರೂಡ್ ಬಡ್ಡಿಯನ್ನು ಕೆನರಾ ಬ್ಯಾಂಕ್ ನವರು ಫಾರಂ ನಂ.26 ಎ ಎಸ್ ನಲ್ಲಿ ನಮೂದಿಸಿದ ಪ್ರಕಾರ ಹೊಂದಾಣಿಕೆ ಕಾಂಟ್ರಾ ಮಾಡಿಕೊಂಡಿದ್ದು, ಹೂಡಿಕೆಗಳಲ್ಲಿ ಬರತಕ್ಕ ಬಡ್ಡಿ ನಿಶ್ಚಿತ ಠೇವಣಿಗಳಲ್ಲಿ ಸೇರಿಕೊಂಡಿರುವಂತೆ ತೋರಿಸಿದ್ದು, ನಿಶ್ಚಿತ ಠೇವಣಿ ಪಕ್ವವಾದ ಮೇಲೆ ಈ ಮೊಬಲಗನ್ನು ಸರ್ಕಾರಕ್ಕೆ ಮರುಪಾವತಿ ಮಾಡಲು ಕ್ರಮ ಅಗತ್ಯ.

20 (1) ಇತರೆ ಜವಾಬ್ದಾರಿ ಸರ್ಕಾರದ ಅನುದಾನಗಳು :-

1) **ತೋಟಗಾರಿಕೆ ಇಲಾಖೆಯಿಂದ ರೈತರ ತರಬೇತಿ ಕಾರ್ಯಕ್ರಮಕ್ಕಾಗಿ (ರೂ.24,95,016–00) :-**

ಸರ್ಕಾರಿ ಆದೇಶ ಸಂ. ತೋಇ/ತೋಜಂನಿ/ಹನೀ/ತರ/ಸತೋಅ–2/47/2007–08, ದಿನಾಂಕ : 4–2–2008 ರಂತೆ 2007–08 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳಕ್ಕೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ವತಿಯಿಂದ ಆದೇಶದಲ್ಲಿ ಸೂಚಿಸಿರುವ 15 ಜಿಲ್ಲೆಗಳಲ್ಲಿ ಜಿಲ್ಲಾ ಹಾಪ್‌ಕಾಮ್ಸ್‌ಗಳ ಮುಖಾಂತರ ರೈತರ ತರಬೇತಿ ಕಾರ್ಯಕ್ರಮ ಮತ್ತು ಗ್ರಾಮ ತೋಟಗಾರಿಕೆ ಕಾರ್ಯಕ್ರಮ ಅನುಷ್ಠಾನಗೊಳಿಸುವ ಸಲುವಾಗಿ ರೂ.30.00 ಲಕ್ಷಗಳು ಮಂಜೂರಾಗಿದ್ದು, 2007–08 ನೇ ಸಾಲಿನಲ್ಲಿ ರೂ.18,35,000–00 ಗಳು, 2008–09 ನೇ ಸಾಲಿನಲ್ಲಿ ರೂ.9,70,000/– ಹೀಗೆ ಒಟ್ಟು ರೂ.28,05,000–00 ಜಮಾ ಬಂದಿರುತ್ತದೆ. ಈ ಪೈಕಿ ಸಾಲಾಖೈರು ದಿನಾಂಕ : 31–03–2021 ರವರೆಗೆ ಕೇವಲ ರೂ.3,09,984–00 ಮಾತ್ರ ವಿನಿಯೋಗಿಸಿದ್ದು, ರೂ.24,95,016–00 ಬಾಕಿ ಇರುತ್ತದೆ. ಜಿಲ್ಲಾ ಹಾಪ್‌ಕಾಮ್ಸ್‌ಗಳು ಕಾರ್ಯಕ್ರಮ ಅನುಷ್ಠಾನ ಪಡಿಸುವ ಕುರಿತು ಸೂಕ್ತ ಪ್ರಸ್ತಾವನೆ ವರದಿಗಳನ್ನು ಸಲ್ಲಿಸದೇ ಇರುವ ಹಿನ್ನಲೆಯಲ್ಲಿ ಹಣ ಬಾಕಿ ಉಳಿದಿರುತ್ತದೆ ಎಂದು ಸಮಜಾಯಿಷಿ ನೀಡಿರುತ್ತಾರೆ. ಈ ಕುರಿತು ಆಡಳಿತ ಮಂಡಳಿಯವರು ಜವಾಬ್ದಾರಿ ವಹಿಸಿ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವನ್ನು ರೈತರಿಗೆ ತರಬೇತಿ ನೀಡುವುದರ ಮುಖೇನ ಅನುಷ್ಠಾನ ಪಡಿಸಲು ಅಗತ್ಯಕ್ರಮ ಕೈಗೊಳ್ಳುವುದು. ವಿವರ ತೋರಿಸುವ ತಃಖ್ತೆ ಅನುಬಂಧ ಲಗತ್ತಿಸಿದೆ. ಆದೇಶದಲ್ಲಿನ ಷರತ್ತುಗಳಂತೆ ಕ್ರಮವಿಟ್ಟಿರುವುದಿಲ್ಲ. ಆದೇಶದ ಪ್ರತಿಯನ್ನು ವರದಿಗೆ ಲಗತ್ತಿಸಿದೆ.

Karnataka State Co-operative Horticultural Marketing Federation Ltd. ಕೆ.ಹೆಚ್.ಎಫ್. K.H.F. Bangalore-560023 ಬೆಂಗಳೂರು-23

A T HEGDE & CO BENGALURU FRN: 014704S Chartered Accountants

ಜಿಲ್ಲಾ ಹಾಪ್‌ಕಾಮ್ಸ್‌ಗಳ ವತಿಯಿಂದ ಬಿಡುಗಡೆ ಮಾಡಿರುವ ಅನುದಾನಕ್ಕೆ ತಕ್ಕಂತೆ ಕಾರ್ಯಕ್ರಮ ಆಯೋಜಿಸಲು ಕ್ರಮವಹಿಸಿ ನಂತರದಲ್ಲಿ ಅನುದಾನಗಳನ್ನು ಬಿಡುಗಡೆ ಮಾಡಿ ಪೂರ್ಣ ಪ್ರಮಾಣದಲ್ಲಿ ತರಬೇತಿ ಕಾರ್ಯಕ್ರಮವನ್ನು ಆದೇಶದ ಷರತ್ತುಗಳಂತೆ ಏರ್ಪಡಿಸಲು ಜಿಲ್ಲಾ ಹಾಪ್‌ಕಾಮ್ಸ್‌ಗಳಿಗೆ ಸೂಚಿಸಿ ಅದರಂತೆ ಅನುಷ್ಠಾನ ಪಡಿಸಲು ವಿಫಲರಾದ ಜಿಲ್ಲಾ ಹಾಪ್‌ಕಾಮ್ಸ್‌ಗಳ ಅನುದಾನವನ್ನು ಸರ್ಕಾರಕ್ಕೆ ಹಿಂದಕ್ಕೆ ಪಡೆಯಲು ವ್ಯವಸ್ಥಾಪಕ ನಿರ್ದೇಶಕರು ಕ್ರಮ ವಹಿಸಬೇಕಾಗಿರುತ್ತದೆ. ರೈತರ ತರಬೇತಿ ಹಾಗೂ ಗ್ರಾಮ ತೋಟಗಾರಿಕೆ ತರಬೇತಿಗಾಗಿ ನೀಡಲಾಗಿರುವ ಸದರಿ ಹಣವನ್ನು ಮಂಜೂರಾದ ಉದ್ದೇಶಕ್ಕೆ ಉಪಯೋಗಿಸದೇ ಕೆಲವು ಭಾಗ ಹಣವನ್ನು ಕೆ.ಹೆಚ್.ಎಫ್. ನ ಬೇರೆ ಉದ್ದೇಶಕ್ಕೆ ಬಳಸಿಕೊಂಡಿರುವುದು ಕಂಡು ಬರುತ್ತದೆ. ಕೆ.ಹೆಚ್.ಎಫ್. ಸ್ಥಗಿತ ಸ್ಥಿತಿಯಲ್ಲಿದ್ದಾಗ 2008-09 ನೇ ಸಾಲಿನಲ್ಲಿ ಕಾರ್ಯಚಟುವಟಿಕೆಗಳಿಗೆ ಚಾಲನೆ ಕೊಡುವ ಉದ್ದೇಶದಿಂದಾಗಿ ಕೆಲವು ಭಾಗ ಹಣವನ್ನು ಹಣ್ಣು ಮತ್ತು ತರಕಾರಿ ವ್ಯವಹಾರಕ್ಕೆ ಬಳಸಿಕೊಂಡಿರುವುದಾಗಿ ಸಮಜಾಯಿಷಿ ನೀಡಿರುತ್ತಾರೆ. ಕೂಡಲೇ ಸದರಿ ಹಣವನ್ನು ಕ್ರೂಢೀಕರಿಸಿ ರೈತರ ತರಬೇತಿ ಹಾಗೂ ಗ್ರಾಮ ತೋಟಗಾರಿಕೆ ತರಬೇತಿ ಕಾರ್ಯಕ್ರಮಗಳನ್ನು ಸಂಬಂಧಪಟ್ಟ ಜಿಲ್ಲೆಗಳಲ್ಲಿ ನಡೆಸುವುದು ಇಲ್ಲವೇ ಸದರಿ ಬಾಕಿ ಉಳಿದ ಹಣವನ್ನು ಸರ್ಕಾರಕ್ಕೆ ಕೂಡಲೇ ಮರಳಿಸುವುದು. ಮುಂದೆ ಯಾವುದೇ ರೀತಿಯ ತಂಟೆ ತಕರಾರು ಕಾನೂನಿನ ತೊಡಕು ಉಂಟಾದಲ್ಲಿ ಸಂಬಂಧಪಟ್ಟ ಅವಧಿಯ ಆಡಳಿತ ಮಂಡಳಿ ಸದಸ್ಯರು ಸಂಪೂರ್ಣ ಜವಾಬ್ದಾರರಾಗುತ್ತಾರೆ.

20 (2) ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಅನುದಾನ (ರೂ.549-00) :-

ಕೆ.ಹೆಚ್.ಎಫ್. ಸಂಸ್ಥೆಯು ಜಿಲ್ಲಾ ಹಾಪ್‌ಕಾಮ್ಸ್‌ಗಳು ಮತ್ತು ಕೆ.ಹೆಚ್.ಎಫ್. ಸಂಸ್ಥೆಯನ್ನು ಬಲಪಡಿಸುವ ಉದ್ದೇಶಕ್ಕಾಗಿ 2008-09 ರ ಅವಧಿಯಲ್ಲಿ ತಯಾರಿಸಿದ ಡಿಟೈಲ್‌ಡ್ ಪ್ರೊಜೆಕ್ಟ್ ರಿಪೋರ್ಟ್ (ಡಿ.ಪಿ.ಆರ್.) ಮೇರೆಗೆ ಜಿಲ್ಲಾ ಹಾಪ್‌ಕಾಮ್ಸ್ ಹಾಗೂ ಕೆ.ಹೆಚ್.ಎಫ್. ಸಂಸ್ಥೆಗಳನ್ನು ಬಲಪಡಿಸಲು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಆರ್.ಕೆ.ವಿ.ವೈ.) ಯನ್ನು 2008-09 ರಿಂದ 2011-12 ನೇ ಸಾಲಿನವರೆಗೆ 4 ವರ್ಷಗಳ ಕಾರ್ಯ ಯೋಜನೆ (Plan of Action) ಯನ್ನು ರಚಿಸಿದ್ದು, ಘನ ಸರ್ಕಾರದ ಆದೇಶ ಸಂ.ಕೃತೋಇ/201/ತೋಯೋಕಾ/2008, ಬೆಂಗಳೂರು ದಿನಾಂಕ : 11-12-2008 ರಂತೆ ಮಂಜೂರು ಮಾಡಿದ್ದು, ತೋಟಗಾರಿಕೆ ನಿರ್ದೇಶಕರ ಆದೇಶ ಸಂಖ್ಯೆ : ತೋಇ/ತೋಜಂನಿ/ತರ/ವಿನಿ-2/40/2008-09, ದಿನಾಂಕ : 12-12-2008 ರ ಮೇರೆಗೆ ರೂ.8.50 ಕೋಟಿ ಹಣವನ್ನು 2008-09 ನೇ ಸಾಲಿನ ಕ್ರಿಯಾ ಯೋಜನೆ ಅನುಷ್ಠಾನಕ್ಕಾಗಿ ಮಂಜೂರಾತಿ ನೀಡಿರುತ್ತಾರೆ. ಈ ಪೈಕಿ ರೂ.2.00 ಕೋಟಿಗಳನ್ನು ನೇರವಾಗಿ ಬೆಂಗಳೂರು ಹಾಪ್‌ಕಾಮ್ಸ್‌ನವರಿಗೆ ತೋಟಗಾರಿಕೆ ನಿರ್ದೇಶಕರು ಬಿಡುಗಡೆ ಮಾಡಿ ಉಳಿದ ಹಣದ ಪೈಕಿ ರೂ.4.25 ಕೋಟಿಗಳನ್ನು ಕೆ.ಹೆಚ್.ಎಫ್.ಗೆ ಬಿಡುಗಡೆ ಮಾಡಿದ್ದು, ದಿನಾಂಕ : 20-01-2009 ರಂದು ಕೆ.ಹೆಚ್.ಎಫ್. ಸಂಸ್ಥೆಯ ಕೆನರಾ ಬ್ಯಾಂಕ್, ಸೌತ್ ಎಂಡ್ ಸರ್ಕಲ್ ಶಾಖೆಗೆ ರೂ.4.25 ಕೋಟಿ ಜಮಾ ಆಗಿರುತ್ತದೆ. ಸದರಿ ಮೊಬಲಗನ್ನು ಕೆ.ಹೆಚ್.ಎಫ್. ಸಂಸ್ಥೆ ಯಾವ ಯಾವ ಲೆಕ್ಕ ಶೀರ್ಷಿಕೆಯಡಿ ಎಷ್ಟು ಹಣ ಖರ್ಚು ಮಾಡಬೇಕು ಎಂಬ ಬಗ್ಗೆ ಮಂಜೂರಾದ ಡಿ.ಪಿ.ಆರ್. ಪ್ರಕಾರ ಸೂಚಿಸಿರುತ್ತದೆ. ಡಿ.ಪಿ.ಆರ್. ಪ್ರಕಾರ ಅನುಷ್ಠಾನಗೊಳಿಸಲಾಗಿದೆ.

ಈ ರೀತಿ ಮಂಜೂರಾದ ಹಣ ರೂ.4.25 ಕೋಟಿಗಳಲ್ಲಿ ಕೆ.ಹೆಚ್.ಎಫ್. ಮಹಾಮಂಡಳವು 2009-10 ನೇ ಸಾಲಿನಲ್ಲಿ ಕೇವಲ ರೂ.5,97,686-00 ಗಳನ್ನು ಕೆ.ಹೆಚ್.ಎಫ್. ನ ಆಡಳಿತಾತ್ಮಕ ವೆಚ್ಚಗಳಿಗಾಗಿ ಖರ್ಚು ಮಾಡಿದ್ದು, ಸಾಲಾಖೈರು ದಿನಾಂಕ : 31-03-2020 ಕ್ಕೆ ಸರ್ಕಾರದಿಂದ ಮಂಜೂರಾದ ಆರ್.ಕೆ.ವಿ.ವೈ. ಯೋಜನೆ ಅನುದಾನ ರೂ.16,13,634-05 ಬಾಕಿ ಉಳಿದಿದ್ದು, 2020-21ನೇ ಸಾಲಿನಲ್ಲಿ ಯೋಜನೆ ಅನುದಾನವು ಹೆಚ್ಚು ಕಡಿಮೆ ಪೂರ್ಣವಾಗಿ ಖರ್ಚಾಗಿದ್ದು, ವರ್ಷವಾರು ವಿವರ ಕೆಳಕಂಡಂತಿರುತ್ತದೆ. ವಿವರ ತೋರಿಸುವ ತಃಖ್ತೆ ಲಗತ್ತಿಸಿದೆ.

ಕ್ರಮ ಸಂ	ವಿವರ	2018-19	2019-20	2020-21
1.	ವರ್ಷಾರಂಭಕ್ಕೆ ಇದ್ದ ಪ್ರಾರಂಭದ ಬಾಕಿ	38,98,301-50	26,47,360-05	16,13,634-05
2.	ವರದಿ ಸಾಲಿನಲ್ಲಿ ಜಮಾ	-	-	-
3.	ವರದಿ ಸಾಲಿನಲ್ಲಿ ಖರ್ಚಾದ ಅನುದಾನ	12,50,941-45	10,33,726-00	16,13,085-00
4.	ವರ್ಷಾಂತ್ಯಕ್ಕೆ ಉಳಿದ ಬಾಕಿ	26,47,360-05	16,13,634-05	549-05

J T HEGDE & CO BENGALURU FRN: 014704S Chartered Accountants

ಆರ್.ಕೆ.ವಿ.ವೈ. ಯೋಜನೆ ಅನುಷ್ಠಾನದ ಬಗ್ಗೆ ಆಡಳಿತ ಮಂಡಳಿಯವರು ಜಿಲ್ಲಾ ಹಾಪ್‌ಕಾಮ್ಸ್‌ಗಳಿಂದ ಯೋಜನೆಗಳನ್ನು ಪಡೆದುಕೊಳ್ಳಲು ಮುಂಚಿತವಾಗಿ ಅರಿವು ನೀಡಿ ಪೂರ್ವಭಾವಿ ಸಿದ್ಧತೆ ನಡೆಸಿಕೊಳ್ಳದೆ ಇದ್ದ ಕಾರಣ ಸದರಿ ಹಣ ವೆಚ್ಚವಾಗದೇ ಸಾಲಾಖೈರಿಗೆ ಬಾಕಿ ಉಳಿದಿದೆ. ಆಡಳಿತ ಮಂಡಳಿಯವರು ಯೋಜನೆಗಳ ಅನುಷ್ಠಾನದ ಬಗ್ಗೆ ಮಂದಗತಿ ಅನುಸರಿಸುತ್ತಿರುವುದರಿಂದ ವರ್ಷಾಂತ್ಯಕ್ಕೆ ಸರ್ಕಾರದ ಅನುದಾನ ಖರ್ಚಾಗದೇ ಉಳಿದಿರುವುದು ಕಂಡುಬರುತ್ತದೆ. ಮುಂದಿನ ಅವಧಿಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲು ಕ್ರಮವಿಡಲು ಸೂಚಿಸಿದೆ. ಸದರಿ ಪೂರ್ಣ ಹಣವನ್ನು ಉದ್ದೇಶಕ್ಕನುಗುಣವಾಗಿ ಬಳಸಿಕೊಂಡು ಮುಂದಿನ ವರ್ಷಗಳ ಅನುದಾನಗಳನ್ನು ಬಿಡುಗಡೆ ಮಾಡಿಸಿಕೊಂಡು ಬಳಸಿಕೊಳ್ಳಲು ಸೂಕ್ತ ಕ್ರಮವಿಡುವುದು. ತಪ್ಪಿದ್ದಲ್ಲಿ ಯೋಜನೆ ಅನುಷ್ಠಾನದಲ್ಲಿ ಆದ ವಿಳಂಬಕ್ಕೆ ಆಡಳಿತ ಮಂಡಳಿ ಸದಸ್ಯರೇ ಜವಾಬ್ದಾರರಾಗುತ್ತಾರೆ.

20 (3) ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯ ಯೋಜನೆ ಎಸ್-20, ಎಸ್-07 & ಎಸ್-08 ಹಣ್ಣು ಮತ್ತು ತರಕಾರಿ ಸಂಗ್ರಹಣೆ ಯೋಜನೆ :- ರೂ.4,42,15,456-50

ರಾಜ್ಯ ಸರ್ಕಾರದ ಯೋಜನೆ ಅನ್ವಯ ಜಿಲ್ಲಾ ಹಾಪ್‌ಕಾಮ್ಸ್ ಹಾಗೂ ಕೆ.ಹೆಚ್.ಎಫ್. ಬಲಪಡಿಸಿ ಹಣ್ಣು ತರಕಾರಿ ಸಂಗ್ರಹಣೆ, ಸಂಸ್ಕರಣೆ, ಇತ್ಯಾದಿ ಪ್ರೋತ್ಸಾಹಕ್ಕಾಗಿ ರಾಜ್ಯ ಸರ್ಕಾರದಿಂದ ಮಂಜೂರಾದ ಎಸ್-20 ಎಸ್-07 & ಎಸ್-08 ಯೋಜನೆಯಡಿ ಕೆ.ಹೆಚ್.ಎಫ್. ಮುಖಾಂತರ ಯೋಜನೆ ಅನುಷ್ಠಾನಕ್ಕೆ ಹಣ ಕೆ.ಹೆಚ್.ಎಫ್. ಗೆ ಬಂದಿದ್ದು, ಆಡಿಟ್ ಅವಧಿಯಲ್ಲಿ ಬಂದ ಹಣ ಖರ್ಚು ಮತ್ತು ಬಾಕಿ ವಿವರ ಕೆಳಕಂಡಂತಿದೆ.

ಕ್ರಮ ಸಂ	ವಿವರ	2018-19	2019-20	2020-21
1.	ವರ್ಷಾರಂಭಕ್ಕೆ ಇದ್ದ ಪ್ರಾರಂಭದ ಮೊತ್ತ	6,44,54,190-00	6,96,82,867-50	6,88,69,208-50
2.	ವರದಿ ಸಾಲಿನಲ್ಲಿ ಸರ್ಕಾರದಿಂದ ಜಮಾ	2,00,00,000-00	2,00,00,000-00	2,00,00,000-00
2(ಎ)	ಜಿಲ್ಲಾ ಹಾಪ್‌ಕಾಮ್ಸ್ ನಿಂದ ವಾಪಸ್ಸು	1,83,50,000-00	78,00,000-00	45,44,479-00
3.	ವರದಿ ಸಾಲಿನಲ್ಲಿ ಖರ್ಚು	3,31,21,322-50	2,86,13,659-00	4,91,98,231-00
4.	ವರ್ಷಾಂತ್ಯಕ್ಕೆ ಉಳಿದ ಬಾಕಿ	6,96,82,867-50	6,88,69,208-50	4,42,15,456-50

ಶೀರ್ಷಿಕೆವಾರು ವಿವರ ತೋರಿಸುವ ತಃಖ್ತೆ ತಯಾರಿಸಿದ್ದು ತಾಳೆ ಇರುತ್ತದೆ. ವರದಿಗೆ ಲಗತ್ತಿಸಿದೆ. ಆಡಳಿತ ಮಂಡಳಿಯವರು ಈ ಯೋಜನೆ ಅನುಷ್ಠಾನದಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿಲ್ಲದಿರುವುದು ಕಂಡು ಬರುತ್ತದೆ. ವರ್ಷಾಂತ್ಯಕ್ಕೆ ಮೇಲ್ಕಂಡ ಸರ್ಕಾರದ ಅನುದಾನ ರೂ.4,42 ಕೋಟಿಗಳು ಸರ್ಕಾರದ ಅನುದಾನ ಉದ್ದೇಶಗಳಿಗೆ ಉಪಯೋಗವಾಗದೇ ಉಳಿದಿರುವುದು ಕಂಡು ಬರುತ್ತದೆ. ಸರ್ಕಾರದಿಂದ ಬಿಡುಗಡೆಯಾದ ಉದ್ದೇಶಕ್ಕನುಗುಣವಾಗಿ ಬಳಸಿಕೊಂಡು ಮುಂದಿನ ವರ್ಷದಲ್ಲಿ ಪೂರ್ಣ ಮಟ್ಟದ ಪ್ರಗತಿ ಸಾಧಿಸಲು ಸೂಕ್ತ ಕ್ರಮವಿಡುವುದು. ಸದರಿ ಸರ್ಕಾರದ ಅನುದಾನ ಪೂರ್ಣ ಮಟ್ಟದಲ್ಲಿ ಉಪಯೋಗಿಸಿಕೊಳ್ಳಲು ಆಗದೇ ಇದ್ದಲ್ಲಿ ಸರ್ಕಾರಕ್ಕೆ ಮರಳಿಸಿ ಮುಂದೆ ಅನುಷ್ಠಾನಗೊಳಿಸಬಹುದಾದಂತಹ ಸೂಕ್ತ ಯೋಜನೆಗಳನ್ನು ತಯಾರಿಸಿ ಮುಂದಿನ ಅವಧಿಯಲ್ಲಿ ಅನುದಾನ ಬಿಡುಗಡೆಗೊಳಿಸಿಕೊಳ್ಳಲು ಆಡಳಿತ ಮಂಡಳಿಯವರು ಸೂಕ್ತ ಕ್ರಮವಿಡುವುದು. ತಪ್ಪಿದ್ದಲ್ಲಿ ಯೋಜನೆ ಅನುಷ್ಠಾನದಲ್ಲಿ ಆದ ವಿಳಂಬಕ್ಕೆ ಆಡಳಿತ ಮಂಡಳಿ ಸದಸ್ಯರೇ ವೈಯುಕ್ತಿಕ ಜವಾಬ್ದಾರರಾಗುತ್ತಾರೆ. ಈ ಬಗ್ಗೆ ಜಿಲ್ಲಾ ಹಾಪ್‌ಕಾಮ್ಸ್‌ಗಳಿಗೆ ಸೂಕ್ತ ತಿಳುವಳಿಕೆ ಮಾರ್ಗದರ್ಶನ ಹಾಗೂ ಅರಿವು ಮೂಡಿಸಿ ಸರ್ಕಾರದ ಅನುದಾನ ಸದುಪಯೋಗ ಪಡಿಸಿಕೊಳ್ಳುವಂತೆ ಕ್ರಮವಿಡತಕ್ಕದ್ದು.

J T HEGDE & CO BENGALURU FRN: 014704S Chartered Accountants

20 (4) ಅವಕಾಶಗಳು ಕಾಯ್ದಿರಿಸಿದ್ದು ಪಾವತಿಸಬೇಕಾದ್ದು:-

ದಿನಾಂಕ : 31-03-2021 ಕ್ಕೆ ಜವಾಬ್ದಾರಿ ಕಡೆಯಲ್ಲಿ ನಮೂದಿಸಿರುವ ಪ್ರಕಾರ ರೂ.1,00,000-00 ಗಳನ್ನು ಪಾವತಿಸಬೇಕಾಗಿದ್ದು, ವಿವರ ಕೆಳಕಂಡಂತಿರುತ್ತದೆ.

ಕ್ರಮ ಸಂ.	ವಿವರ	ಮೊಬಲಗು
1.	ಸಿ.ಎ. ಲೆಕ್ಕ ಪರಿಶೋಧನಾ ಶುಲ್ಕ ಅವಕಾಶ 2020-21	ರೂ.1,00,000-00
	ಒಟ್ಟು ಜುಮ್ಲಾ	**ರೂ.1,00,000-00**

1. **ಸಿ.ಎ. ಲೆಕ್ಕ ಪರಿಶೋಧನಾ ಶುಲ್ಕ :-**
   2020-21 ನೇ ಸಾಲಿಗೆ ರೂ.1,00,000-00, ಸನ್ನದು ಲೆಕ್ಕ ಪರಿಶೋಧನೆ ಫೀಗಾಗಿ ಕಾಯ್ದಿರಿಸಿದ್ದು, ಸರ್ಕಾರ ನಿಗಧಿಪಡಿಸಿರುವ ದರದಲ್ಲಿ ಸನ್ನದು ಲೆಕ್ಕ ಪರಿಶೋಧಕರಿಗೆ ಪಾವತಿಸಲು ಕ್ರಮ ಅಗತ್ಯ.

21.	**ಡಿವಿಡೆಂಡ್:** 1. ಪ್ರಸಕ್ತ ಸಾಲಿನ ಘೋಷಿಸಲ್ಪಟ್ಟ ಡಿವಿಡೆಂಡ್ ಪ್ರತಿಶತ ದರ. 2. ವರದಿ ಸಾಲಿನಲ್ಲಿ ಪಾವತಿಸಿದ ಅವಧಿವಾರು ಡಿವಿಡೆಂಡ್ ಮೊತ್ತ. 3. ಡಿವಿಡೆಂಡ್ ಆಕರಣೆ ಸರಿ ಇದ್ದ ಬಗ್ಗೆ ವಿವರಣೆ. 4. ಸಾಲಾಖೈರಿಗೆ ಬಾಕಿ ಕುರಿತು ವರ್ಷವಾರು ಕುಳುವಾರು ತಯಾರಿಸಿ ತಾಳೆ ನೋಡಿದೆಯೇ?	ಪ್ರಸಕ್ತ ಸಾಲಿನಲ್ಲಿ 2019-20ನೇ ಸಾಲಿನ ಲಾಭ ವಿಂಗಡಣೆ ಮಾಡಿಕೊಂಡಿದ್ದು ಜಮಾ-ಖರ್ಚು ತಃಖ್ತೆಯಲ್ಲಿ ವಿವರಿಸಿರುವಂತೆ ಸರ್ವ ಸದಸ್ಯರ ಸಭೆ ನಿರ್ಣಯದಂತೆ ಡಿವಿಡೆಂಡ್ ಘೋಷಣೆ ಮಾಡಿರುವುದಿಲ್ಲ.
22.	**ನಿವ್ವಳ ಲಾಭ ಮತ್ತು ನಷ್ಟದ ಬಗ್ಗೆ ವಿವರಣೆ:**	ಕೆ.ಹೆಚ್.ಎಫ್., ಮಹಾಮಂಡಳವು 2020-21 ನೇ ಸಾಲಿನಲ್ಲಿ ರೂ.9,72,594-00 ಒಟ್ಟು ನಿವ್ವಳ ಲಾಭ ಗಳಿಸಿರುತ್ತದೆ. ಸದರಿ ಲಾಭವನ್ನು ಕಾಯ್ದೆ, ನಿಯಮ, ಬೈಲಾ ಪ್ರಕಾರ ವಿಂಗಡಿಸಿ ಮಹಾಸಭೆಯ ಮಂಜೂರಿಯೊಂದಿಗೆ ಲಾಭವಿಭಾಗಣೆ ಮಾಡಿಕೊಳ್ಳಲು ಕ್ರಮವಿಡಲು ಸೂಚಿಸಿದೆ.
23.	**ನಗದು ಶಿಲ್ಕು:** 1. ಸಾಲಾಖೈರಿಗೆ ಇರುವ ನಗದು ಶಿಲ್ಕು ಮೊತ್ತ. 2. ಸದರಿ ಪ್ರತ್ಯಕ್ಷ ಪರಿಶೀಲಿಸಿ ದೃಢೀಕರಿಸಿದೆಯೇ?	ಆಡಿಟ್ ಅವಧಿಯ ಸಾಲಾಖೈರುಗಳಿಗೆ ನಗದು ಶಿಲ್ಕು ಕೆಳಕಂಡಂತಿರುತ್ತದೆ. ಸಾಲಾಖೈರಿಗೆ ಇಲಾಖಾಧಿಕಾರಿಗಳಿಂದಾಗಲಿ ಅಥವಾ ಕಾರ್ಯಕಾರಿ ಮಂಡಳಿಯವರಿಂದಾಗಲಿ ನಗದು ಶಿಲ್ಕು ಹಣವನ್ನು ಝಡ್ತಿ ಮಾಡಿರುವುದಕ್ಕೆ ಯಾವುದೇ ದಾಖಲೆಗಳಿರುವುದಿಲ್ಲ.

	31-3-2019	31-3-2020	31-3-2021
ಕೆಹೆಚ್ಎಫ್.	67-00	12-00	4,969-00
ಎಸ್-07.	21,192-00	6,201-00	3,130-00

	3. ಬೈಲಾ ಪ್ರಕಾರ ನಗದು ಶಿಲ್ಕು ಪರಿಮಿತಿ ಮತ್ತು ಯಾರ ಅಧೀನದಲ್ಲಿ ಇರುವುದು.	ಬೈಲಾ ಸಂಖ್ಯೆ ಅಧ್ಯಾಯ 9 ರ ಪ್ರಕಾರ ನಗದು ಶಿಲ್ಕು ಮಿತಿ ರೂ.1,00,000/- ಗಳು ಇರುತ್ತದೆ. ಸಣ್ಣ ರಜೆಗಳು ಇದ್ದಲ್ಲಿ ರೂ.5,00,000/- ಗಳ ಮಿತಿಗೊಳಪಡಿಸಲಾಗಿದೆ. ನಗದು ಶಿಲ್ಕು ಹಣವನ್ನು ವ್ಯವಸ್ಥಾಪಕ ನಿರ್ದೇಶಕರವರಲ್ಲಿ ಇಟ್ಟುಕೊಳ್ಳಬಹುದೆಂದು ತೀರ್ಮಾನಿಸಿರುತ್ತಾರೆ. ನಗದು ಶಿಲ್ಕು ಮಿತಿಯೊಳಗೆ ಇಟ್ಟುಕೊಳ್ಳಲು ಕ್ರಮ ಅಗತ್ಯ.
	4. ನಗದು ಶಿಲ್ಕಿಗೆ ವಿಮೆ ಮಾಡಲಾಗಿದೆಯೇ?	ಸಂಘದಲ್ಲಿ ಪ್ರತಿನಿತ್ಯ ಉಳಿಯುವ ನಗದು ಶಿಲ್ಕಿಗೆ ವಿಮೆ ಮಾಡಿಸಿಲ್ಲ ಮಹಾಮಂಡಳದ ಕಛೇರಿಯಲ್ಲಿ ಉಳಿಯುವ ಹಾಗೂ ಬ್ಯಾಂಕಿಗೆ ಕೊಂಡೊಯ್ಯುವ ಶಿಲ್ಕಿಗೆ ವಿಮೆ ಮಾಡಿಸಲು ಕ್ರಮ ಅಗತ್ಯ.
